B2

1. ಗ್ಲಾಸ್ಗೋದಲ್ಲಿ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟ 2026ರ ಉದ್ಘಾಟನಾ ಅಥವಾ ಸಮಾರೋಪ ಸಮಾರಂಭದಲ್ಲಿ ಕೆಳಗಿನವರಲ್ಲಿ ಯಾರು ಯಾವುದೇ ಜವಾಬ್ದಾರಿಯನ್ನು ನಿರ್ವಹಿಸಿರಲಿಲ್ಲ ?

(1) ವೇಟ್‌ಲಿಫ್ಟರ್ ಮೀರಾಬಾಯಿ ಚಾನು
(2) ಬಾಕ್ಸರ್ ಲವ್ಲಿನಾ ಬೊರ್ಗೊಹೈನ್
(3) ಬಾಕ್ಸರ್ ಜಾಸ್ಮಿನ್ ಲಂಬೋರಿಯಾ
(4) ಶೂಟರ್ ಮನು ಭಾಕರ್

2. ಸೋನಿಯಾ ಗಾಂಧಿಯವರ ಮುಂಬರುವ ಆತ್ಮಚರಿತ್ರೆಯ ಹೆಸರೇನು?

(1) ಮೈ ಲೈಫ್, ಮೆಮೊಯಿರ್: ಮೈ ಜರ್ನಿ
(2) ದಿ ರೆಡ್ ಸಾರಿ: ಆನ್ ಆಟೋಬಯೋಗ್ರಫಿ
(3) ಕೋರ್ಟಿಂಗ್ ಡೆಸ್ಟಿನಿ: ಮೈ ಮೆಮೊಯಿರ್
(4) ಬಿಲಾಂಗಿಂಗ್: ಎ ಜರ್ನಿ ಆಫ್ ಲವ್

3. ಕೇರಳ ರಾಜ್ಯದ ಹೆಸರನ್ನು "ಕೇರಳಂ" ಎಂದು ಮರು ನಾಮಕರಣ ಮಾಡಲು ಕೇರಳ (ಹೆಸರು ಬದಲಾವಣೆ) ಮಸೂದೆ, 2026 ಅನ್ನು ಭಾರತ ಸಂವಿಧಾನದ ಯಾವ ವಿಧಿಯ ಅಡಿಯಲ್ಲಿ ಅಂಗೀಕರಿಸಲಾಗಿದೆ?

(1) ವಿಧಿ 1
(2) ವಿಧಿ 3
(3) ವಿಧಿ 5
(4) ವಿಧಿ 7

4. 2026ರ ಗ್ರ್ಯಾಂಡ್‌ಸ್ಲಾಮ್ ಟೆನ್ನಿಸ್ ಮತ್ತು ವಿಜೇತರಿಗೆ ಸಂಬಂಧಿಸಿದಂತೆ ಕೆಳಗಿನ ಜೋಡಿಗಳನ್ನು ಪರಿಗಣಿಸಿ:

(a) ಆಸ್ಟ್ರೇಲಿಯನ್ ಓಪನ್ – ಅಲೆಗ್ಸಾಂಡರ್ ಜ್ವರೇವ್
(b) ಫ್ರೆಂಚ್ ಓಪನ್ – ಕಾರ್ಲೋಸ್ ಅಲ್ಕರಾಜ್
(c) ವಿಂಬಲ್ಡನ್ – ಜನ್ನಿಕ್ ಸಿನ್ನರ್

ಮೇಲಿನ ಯಾವ ಜೋಡಿ/ಗಳು ತಪ್ಪಾಗಿ ಹೊಂದಿಕೆಯಾಗಿದೆ/ವೆ?

(1) (a) ಮಾತ್ರ
(2) (b) ಮತ್ತು (c)
(3) (a) ಮತ್ತು (b)
(4) (c) ಮಾತ್ರ

ಕಚ್ಚಾ ಕೆಲಸಕ್ಕೆ ಸ್ಥಳ

Telegram : @GEOKING_18

5. ಕಸ್ತೂರಿ ರಂಗನ್ ವರದಿಯ ಪ್ರಸ್ತಾವಿತ ಪರಿಸರ ಸೂಕ್ಷ್ಮ ಪ್ರದೇಶದ ಅಡಿಯಲ್ಲಿ ಈ ಕೆಳಗಿನ ಯಾವ ಜಿಲ್ಲೆಗಳು ಬರುತ್ತವೆ?

(a) ಉಡುಪಿ, ಉತ್ತರ ಕನ್ನಡ, ದಕ್ಷಿಣಕನ್ನಡ

(b) ಹಾಸನ, ಕೊಡಗು, ಚಿಕ್ಕಮಗಳೂರು

(c) ಧಾರವಾಡ, ಬೆಂಗಳೂರು ಗ್ರಾಮಾಂತರ

(d) ಬೆಳಗಾವಿ, ಮೈಸೂರು, ಚಾಮರಾಜನಗರ, ಶಿವಮೊಗ್ಗ

(1) (a) ಮತ್ತು (b) (2) (a), (b) ಮತ್ತು (d)

(3) (b), (c) ಮತ್ತು (d) (4) (a), (b), (c) ಮತ್ತು (d)

6. 'ಬುದ್ಧ ರಶ್ಮಿ ಮಣಿ',ಮಾಜಿ ಮಹಾನಿರ್ದೇಶಕರು, ರಾಷ್ಟ್ರೀಯ ವಸ್ತುಸಂಗ್ರಹಾಲಯ, ನವದೆಹಲಿ ಅವರು ಕೆಳಗಿನ ಯಾವ ಸ್ಥಳಗಳಲ್ಲಿ ಉತ್ಖನನ ನಡೆಸಿದ್ದಾರೆ?

(a) ಸಾರನಾಥ

(b) ಅಯೋಧ್ಯಾ

Telegram : @GEOKING_18

(c) ಧೋಲವಿರಾ

(d) ರಾಖಿಗಢಿ

ಕೆಳಗಿನ ಸಂಕೇತಗಳನ್ನು ಬಳಸಿ ಸರಿಯಾದ ಉತ್ತರ ಆಯ್ಕೆ ಮಾಡಿ:

(1) (a), (b) ಮತ್ತು (c) (2) (b) ಮತ್ತು (d)

(3) (a), (b) ಮತ್ತು (d) (4) (a) ಮತ್ತು (b)

7. MIST ಅನ್ನು ವಿಸ್ತರಿಸಿ:

(1) ಮ್ಯೂಸಿಯಂ ಆಫ್ ಇನ್‌ಫಾರ್ಮೇಷನ್, ಸೈನ್ಸ್ ಆ್ಯಂಡ್ ಟೆಕ್ನಾಲಜಿ

(2) ಮ್ಯೂಸಿಯಂ ಆಫ್ ಇನ್ನೋವೇಷನ್, ಸ್ಟಾರ್ಟ್‌ಅಪ್ ಆ್ಯಂಡ್ ಟೆಕ್ನಾಲಜಿ

(3) ಮಿನಿಸ್ಟರಿ ಆಫ್ ಇನ್ನೋವೇಷನ್, ಸ್ಟಾರ್ಟ್‌ಅಪ್ ಆ್ಯಂಡ್ ಟೆಕ್ನಾಲಜಿ

(4) ಮ್ಯೂಸಿಯಂ ಆಫ್ ಇನ್‌ಫಾರ್ಮೇಷನ್, ಸೈನ್ಸ್ ಆ್ಯಂಡ್ ಟೂರಿಸಂ

ಕಚ್ಚಾ ಕೆಲಸಕ್ಕೆ ಸ್ಥಳ

Telegram : @GEOKING_18

8. ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

ಹೇಳಿಕೆ-I : 2025ರ ಸಬ್ಕಾ ಬಿಮಾ, ಸಬ್ಕಿ ರಕ್ಷಾ ಕಾಯ್ದೆಯು ಪಾಲಿಸಿದಾರರ ರಕ್ಷಣೆಯನ್ನು ಬಲಪಡಿಸಲು 1938ರ ವಿಮಾ ಕಾಯ್ದೆಯನ್ನು ತಿದ್ದುಪಡಿ ಮಾಡಿದೆ.

ಹೇಳಿಕೆ-II : ವಿಮಾ ವಲಯದಲ್ಲಿ ವಿದೇಶಿ ನೇರ ಹೂಡಿಕೆಯನ್ನು ಕಡಿಮೆ ಮಾಡುವುದು ಇದರ ಉದ್ದೇಶವಾಗಿದೆ.

ಕೆಳಗಿನ ಸಂಕೇತಗಳನ್ನು ಬಳಸಿ ಸರಿಯಾದ ಉತ್ತರ ಆಯ್ಕೆ ಮಾಡಿ:

(1) ಹೇಳಿಕೆ -I ಮತ್ತು II ಎರಡೂ ಸರಿಯಾಗಿವೆ ಹಾಗೂ ಹೇಳಿಕೆ-II ಹೇಳಿಕೆ-I ರ ಸರಿಯಾದ ವಿವರಣೆಯಾಗಿದೆ.

(2) ಹೇಳಿಕೆ -I ಮತ್ತು II ಎರಡೂ ಸರಿಯಾಗಿವೆ, ಆದರೆ ಹೇಳಿಕೆ-II ಹೇಳಿಕೆ-I ರ ಸರಿಯಾದ ವಿವರಣೆ ಅಲ್ಲ.

(3) ಹೇಳಿಕೆ -I ಸರಿಯಾಗಿದೆ, ಆದರೆ ಹೇಳಿಕೆ-II ತಪ್ಪಾಗಿದೆ.

(4) ಹೇಳಿಕೆ -I ತಪ್ಪಾಗಿದೆ, ಆದರೆ ಹೇಳಿಕೆ-II ಸರಿಯಾಗಿದೆ.

9. 2026ರಲ್ಲಿ ಯಾವ ಮಾಜಿ ವಿಶ್ವ ಚೆಸ್ ಚಾಂಪಿಯನ್ ಅವರಿಗೆ ಎರಡು ವರ್ಷಗಳ ಜಾಗತಿಕ ನಿಷೇಧವನ್ನು ವಿಧಿಸಲಾಯಿತು?

Telegram : @GEOKING_18

(1) ಮ್ಯಾಗ್ನಸ್ ಕಾರ್ಲ್‌ಸನ್
(2) ಗ್ಯಾರಿ ಕ್ಯಾಸ್ಪರೋವ್
(3) ವ್ಲಾಡಿಮಿರ್ ಕ್ರಾಮ್ನಿಕ್
(4) ವೆಸೆಲಿನ್ ಟೋಪಲೋವ್

10. ಯುಎನ್ ಹವಾಮಾನ ಬದಲಾವಣೆ ಸಮ್ಮೇಳನ(COP)ಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:

(a) 2028ರಲ್ಲಿ ನಿಗದಿಯಾಗಿರುವ COP-33 ಶೃಂಗಸಭೆಯನ್ನು ಆಯೋಜಿಸುವ ತನ್ನ ಪ್ರಸ್ತಾವನೆಯನ್ನು ಭಾರತ ಇತ್ತೀಚೆಗೆ ಹಿಂತೆಗೆದುಕೊಂಡಿದೆ.

(b) COP-31 ಶೃಂಗಸಭೆಯನ್ನು ದಕ್ಷಿಣ ಆಫ್ರಿಕಾ ಮತ್ತು ನಮೀಬಿಯಾ ಜಂಟಿಯಾಗಿ ಆಯೋಜಿಸಲು ನಿರ್ಧರಿಸಲಾಗಿದೆ.

(c) ಬ್ರೆಜಿಲ್ ದೇಶವು COP-30ರ ಶೃಂಗಸಭೆಯನ್ನು ಆಯೋಜಿಸಿತ್ತು.

ಮೇಲಿನ ಯಾವ ಹೇಳಿಕೆಗಳು ಸರಿಯಾಗಿವೆ?

(1) (a), (b) ಮತ್ತು (c)
(2) (a) ಮತ್ತು (b) ಮಾತ್ರ
(3) (a) ಮತ್ತು (c) ಮಾತ್ರ
(4) (b) ಮತ್ತು (c) ಮಾತ್ರ

ಕಚ್ಚಾ ಕೆಲಸಕ್ಕೆ ಸ್ಥಳ

Telegram : @GEOKING_18

11. ಭಕ್ತಿ ಪಂಥ ಚಳುವಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಜೋಡಿಗಳು ಸರಿಯಾಗಿವೆ?

(a) ರಮಾನಂದ - ವಾರಣಾಸಿ

(b) ವಲ್ಲಭಾಚಾರ್ಯ - ಅಲಹಾಬಾದ್

(c) ಚೈತನ್ಯ - ನಾಡಿಯಾ

(d) ಏಕನಾಥ - ಪೈಥಾನ

(1) (a), (b) ಮತ್ತು (c)
(2) (a), (c) ಮತ್ತು (d)
(3) (a), (b) ಮತ್ತು (d)
(4) (c) ಮತ್ತು (d)

12. 2ನೇ ದೇವರಾಯನು 'ದಕ್ಷಿಣ ಸಮುದ್ರಾಧಿಪತಿ' ಎಂಬ ಬಿರುದನ್ನು ಯಾರಿಗೆ ನೀಡಿ ಗೌರವಿಸಿದನು?

(1) ಕುಮಾರವ್ಯಾಸ

(2) ಚಾಮರಸ

Telegram : @GEOKING_18

(3) ಲಕ್ಕಣ್ಣ ದಂಡೇಶ

(4) ವಿಜಯ ರಾಯ

13. "ದತ್ತು ಮಕ್ಕಳಿಗೆ ಹಕ್ಕಿಲ್ಲ" ನೀತಿಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಹೇಳಿಕೆ–I : ಈ ನೀತಿಯನ್ನು ಲಾರ್ಡ್ ಡಾಲ್‌ಹೌಸಿ ಜಾರಿಗೆ ತಂದನು.

ಹೇಳಿಕೆ–II : ಈ ನೀತಿಗೆ ಬಲಿಯಾದ ಪ್ರಥಮ ರಾಜ್ಯ ಹೈದರಾಬಾದ್.

ಮೇಲಿನ ಹೇಳಿಕೆಗಳಿಗೆ ಸಂಬಂಧಿಸಿದಂತೆ ಕೆಳಗಿನವುಗಳಲ್ಲಿ ಯಾವುದು ಸರಿ?

(1) ಹೇಳಿಕೆ -I ಮತ್ತು ಹೇಳಿಕೆ -II ಎರಡೂ ಸರಿ.

(2) ಹೇಳಿಕೆ -I ಮತ್ತು ಹೇಳಿಕೆ -II ಎರಡೂ ತಪ್ಪು.

(3) ಹೇಳಿಕೆ -I ಸರಿ, ಆದರೆ ಹೇಳಿಕೆ -II ತಪ್ಪು.

(4) ಹೇಳಿಕೆ -I ತಪ್ಪು, ಆದರೆ ಹೇಳಿಕೆ -II ಸರಿ.

ಕಚ್ಚಾ ಕೆಲಸಕ್ಕೆ ಸ್ಥಳ

Telegram : @GEOKING_18

14. ಈ ಕೆಳಗಿನವುಗಳಲ್ಲಿ ಸರಿಯಾಗಿ ಹೊಂದಾಣಿಕೆಯಾದ ಜೋಡಿಗಳನ್ನು ಗುರುತಿಸಿ.

(a) ಅಲ್ಲಾಸಾನಿ ಪೆದ್ದಣ್ಣ - ಮನುಚರಿತಮು

(b) ತಿಮ್ಮಣ್ಣ - ಪಾರಿಜಾತಾಪಹರಣಮು

(c) ದೂರ್ಜಟಿ - ಕಾಳಹಸ್ತಿ ಶತಕಂ

(d) ತೆನಾಲಿ ರಾಮಕೃಷ್ಣ - ಪಾಂಡುರಂಗ ಮಹಾತ್ಮೆ

(1) (a), (b), (c) ಮತ್ತು (d)
(2) (a) ಮತ್ತು (b)
(3) (a) ಮತ್ತು (d)
(4) (b) ಮತ್ತು (c)

15. ಪಟ್ಟಿ-I ಅನ್ನು ಪಟ್ಟಿ-II ರ ಜೊತೆ ಹೊಂದಿಸಿ, ಸರಿಯಾದ ಉತ್ತರವನ್ನು ಆರಿಸಿ.

| ಪಟ್ಟಿ-I | | ಪಟ್ಟಿ-II | |
|---|---|---|---|
| (a) | ರೂಪನಾಥ ಶಿಲಾಶಾಸನ | (i) | ಕರ್ನಾಟಕ |
| (b) | ಸಹಸ್ರಾಮ್ ಶಿಲಾಶಾಸನ | (ii) | ರಾಜಸ್ಥಾನ |
| (c) | ಬೈರತ್ ಶಿಲಾಶಾಸನ | (iii) | ಬಿಹಾರ |
| (d) | ಮಸ್ಕಿ ಶಿಲಾಶಾಸನ | (iv) | ಮಧ್ಯಪ್ರದೇಶ |

Telegram : @GEOKING_18

ಸಂಕೇತಗಳು:

(1) a – i, b – ii, c – iii, d – iv
(2) a – iii, b – iv, c – i, d – ii
(3) a – ii, b – iii, c – iv, d – i
(4) a – iv, b – iii, c – ii, d – i

16. ಈ ಕೆಳಗಿನ ಮೈಸೂರಿನ ದಿವಾನರನ್ನು ಕಾಲಾನುಕ್ರಮದಲ್ಲಿ ಜೋಡಿಸಿ.

(a) ಕಾಂತರಾಜ ಅರಸ್

(b) ಪಿ.ಎನ್. ಕೃಷ್ಣಮೂರ್ತಿ

(c) ಮಿರ್ಜಾ ಇಸ್ಮಾಯಿಲ್

(d) ಸಿ. ರಂಗಾಚಾರ್ಲು

(1) (a), (b), (c), (d)
(2) (c), (d), (a), (b)
(3) (d), (b), (a), (c)
(4) (c), (a), (b), (d)

ಕಚ್ಚಾ ಕೆಲಸಕ್ಕೆ ಸ್ಥಳ

Telegram : @GEOKING_18

17. ಸ್ವದೇಶೀ ಚಳುವಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ.

(a) ಸ್ವಾವಲಂಬನೆಗೆ ಪ್ರಾಧಾನ್ಯತೆ

(b) ರಾಷ್ಟ್ರೀಯ ಪ್ರತಿಷ್ಠೆ, ಗೌರವ ಮತ್ತು ಆತ್ಮವಿಶ್ವಾಸವನ್ನು ಮೂಡಿಸುವುದು.

(c) ಆರ್ಥಿಕ ಕ್ಷೇತ್ರದಲ್ಲಿ ದೇಶೀಯ ಕೈಗಾರಿಕೆ ಮತ್ತು ಇತರೆ ಉದ್ಯಮಗಳನ್ನು ಪೋಷಿಸುವುದು.

(d) ಬ್ರಿಟಿಷರ ಆಡಳಿತಕ್ಕೆ ಸಹಕರಿಸುವುದು. Telegram : @GEOKING_18

ಮೇಲಿನ ಯಾವ ಹೇಳಿಕೆಗಳು ಸರಿಯಾಗಿವೆ?

(1) (a), (b) ಮತ್ತು (c)
(2) (b), (c) ಮತ್ತು (d)
(3) (a), (b) ಮತ್ತು (d)
(4) (c) ಮತ್ತು (d) ಮಾತ್ರ

18. ಅಶೋಕನಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಹೇಳಿಕೆ-I : ಕಳಿಂಗ ಯುದ್ಧದ ನಂತರ ಅಶೋಕನು ಆಕ್ರಮಣ ನೀತಿಯನ್ನು ತ್ಯಜಿಸಿದನು.

ಹೇಳಿಕೆ-II : ಅಶೋಕನು ಯುದ್ಧವನ್ನು ತ್ಯಜಿಸಿದನೇ ಹೊರತು, ಹಿಂದೆ ಗೆದ್ದ ಪ್ರದೇಶಗಳನ್ನು ಸಂಘಟಿಸುವುದರ ಮೂಲಕ ಸಾಮ್ರಾಜ್ಯಶಾಹಿ ನೀತಿಯನ್ನು ಮುಂದುವರಿಸಿದನು.

ಮೇಲಿನ ಹೇಳಿಕೆಗಳಿಗೆ ಸಂಬಂಧಿಸಿದಂತೆ ಕೆಳಗಿನವುಗಳಲ್ಲಿ ಯಾವುದು ಸರಿ?

(1) ಹೇಳಿಕೆ -I ಮತ್ತು ಹೇಳಿಕೆ -II ಎರಡೂ ಸರಿ ಮತ್ತು ಹೇಳಿಕೆ-II ಹೇಳಿಕೆ-I ಅನ್ನು ವಿವರಿಸುತ್ತದೆ.

(2) ಹೇಳಿಕೆ -I ಮತ್ತು ಹೇಳಿಕೆ -II ಎರಡೂ ಸರಿ, ಆದರೆ ಹೇಳಿಕೆ-II ಹೇಳಿಕೆ-I ಅನ್ನು ವಿವರಿಸುವುದಿಲ್ಲ.

(3) ಹೇಳಿಕೆ -I ಸರಿ, ಆದರೆ ಹೇಳಿಕೆ -II ತಪ್ಪು.

(4) ಹೇಳಿಕೆ -I ತಪ್ಪು, ಆದರೆ ಹೇಳಿಕೆ -II ಸರಿ.

ಕಚ್ಚಾ ಕೆಲಸಕ್ಕೆ ಸ್ಥಳ

Telegram : @GEOKING_18

19. ಕೆಳಗಿನವುಗಳಲ್ಲಿ ಸರಿಯಾಗಿ ಹೊಂದಾಣಿಕೆಯಾದ ಜೋಡಿಗಳನ್ನು ಗುರುತಿಸಿ.

| ಸಿಂಧೂ ನಾಗರಿಕತೆಯ ಪ್ರಮುಖ ಸ್ಥಳಗಳು | | ಪ್ರಾಕ್ತನ ತಜ್ಞರ ಹೆಸರುಗಳು |
|---|---|---|
| (a) ಕೋಟ್ ಡಿಜಿ | - | ಎಫ್.ಎ. ಖಾನ್ |
| (b) ಲೋಥಾಲ್ | - | ಡಾ. ಎಸ್.ಆರ್.ರಾವ್ |
| (c) ಹರಪ್ಪಾ | - | ದಯಾರಾಮ್ ಸಹಾನಿ |
| (d) ಮೊಹೆಂಜೊದಾರೊ | - | ಆರ್.ಡಿ. ಬ್ಯಾನರ್ಜಿ |

(1) (a), (c) ಮತ್ತು (d) ಮಾತ್ರ

(2) (b), (c) ಮತ್ತು (d) ಮಾತ್ರ

(3) (a), (b), (c) ಮತ್ತು (d)

(4) (a), (b) ಮತ್ತು (d) ಮಾತ್ರ

Telegram : @GEOKING_18

20. ಈ ಕೆಳಗಿನವುಗಳನ್ನು ಕಾಲಾನುಕ್ರಮದಲ್ಲಿ ಜೋಡಿಸಿ.

(a) ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡ

(b) ಖೇಡಾ ಸತ್ಯಾಗ್ರಹ

(c) ಚಂಪಾರಣ್ ಸತ್ಯಾಗ್ರಹ

(d) ಅಸಹಕಾರ ಚಳುವಳಿ

(1) (c), (a), (b), (d)

(2) (c), (a), (d), (b)

(3) (a), (b), (d), (c)

(4) (c), (b), (a), (d)

ಕಚ್ಚಾ ಕೆಲಸಕ್ಕೆ ಸ್ಥಳ

Telegram : @GEOKING_18

21. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರುಗಳನ್ನು (ಪಟ್ಟಿ-I) ಮತ್ತು ಸಂಬಂಧಿತ ಅಧಿವೇಶನಗಳೊಂದಿಗೆ (ಪಟ್ಟಿ-II) ರೊಂದಿಗೆ ಹೊಂದಿಸಿ

| ಪಟ್ಟಿ-I (ಅಧ್ಯಕ್ಷರು) | | ಪಟ್ಟಿ-II (ಅಧಿವೇಶನಗಳು) | |
|---|---|---|---|
| (a) | ವಲ್ಲಭಭಾಯಿ ಪಟೇಲ್ | (i) | ಸೂರತ್ |
| (b) | ಎ.ಸಿ. ಮಜ್ಞುಂದಾರ್ | (ii) | ಕರಾಚಿ |
| (c) | ರಾಸ್ ಬಿಹಾರಿ ಘೋಷ್ | (iii) | ಲಕ್ನೋ |
| (d) | ಬದ್ರುದ್ದೀನ್ ತ್ಯಾಬ್ಜಿ | (iv) | ಮದ್ರಾಸ್ |

ಸಂಕೇತಗಳು: Telegram : @GEOKING_18

(1) a – i, b – iii, c – iv, d – ii
(2) a – ii, b – iii, c – i, d – iv
(3) a – iii, b – ii, c – iv, d – i
(4) a – ii, b – i, c – iii, d – iv

22. ರಾಣಿ ದಿಡ್ಡಾಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

(a) ಕಾಶ್ಮೀರವನ್ನು ಆಳಿದಳು.

(b) ಲೋಹಾರ ರಾಜಮನೆತನಕ್ಕೆ ಸೇರಿದವಳು.

(c) ಮಹಮ್ಮದ್ ಘಜ್ನಿಯ ವಿರುದ್ಧ ಹೋರಾಡಿದಳು.

(d) ತನ್ನ ಅಪ್ರಾಪ್ತ ಗಂಡು ಮೊಮ್ಮಕ್ಕಳಿಗೆ ರಾಜಪ್ರತಿನಿಧಿಯಾಗಿದ್ದಳು.

ಈ ಮೇಲಿನ ಎಷ್ಟು ಹೇಳಿಕೆ/ಹೇಳಿಕೆಗಳು ಸರಿಯಾಗಿದೆ/ವೆ?

(1) ಒಂದು ಮಾತ್ರ
(2) ಎರಡು ಮಾತ್ರ
(3) ಮೂರು ಮಾತ್ರ
(4) ಎಲ್ಲಾ ನಾಲ್ಕು

ಕಚ್ಚಾ ಕೆಲಸಕ್ಕೆ ಸ್ಥಳ

Telegram : @GEOKING_18

23. ಸರ್. ಎಂ. ವಿಶ್ವೇಶ್ವರಯ್ಯನವರಿಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:

ಹೇಳಿಕೆ I: ಇವರು ದಿವಾನ ಪದವಿಗೆ ರಾಜೀನಾಮೆ ನೀಡಿದ ನಂತರ 6 ವರ್ಷಗಳ ಕಾಲ ಭದ್ರಾವತಿ ಕಬ್ಬಿಣ ಕಾರ್ಖಾನೆಯ ಕಾರ್ಯನಿರ್ವಾಹಕ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು ಮತ್ತು 2 ಲಕ್ಷ ರೂಪಾಯಿಗಳ ಗೌರವಧನವನ್ನು ಪಡೆಯುತ್ತಿದ್ದರು.

ಹೇಳಿಕೆ II: ಈ ಗೌರವಧನವನ್ನು ಇವರು ಬೆಂಗಳೂರಿನ ಬೌರಿಂಗ್ ಆಸ್ಪತ್ರೆಗೆ ದಾನ ಮಾಡಿದ್ದರು.

ಮೇಲಿನ ಯಾವ ಹೇಳಿಕೆ/ಗಳು ಸರಿಯಾಗಿದೆ/ವೆ?

(1) ಹೇಳಿಕೆ I ಮಾತ್ರ
(2) ಹೇಳಿಕೆ-II ಮಾತ್ರ
(3) ಹೇಳಿಕೆ I ಮತ್ತು ಹೇಳಿಕೆ II ಎರಡೂ ಸರಿ
(4) ಹೇಳಿಕೆ I ಮತ್ತು ಹೇಳಿಕೆ-II ಎರಡೂ ಅಲ್ಲ

24. "ಕಾಂಗ್ರೆಸ್ ತನ್ನ ಪತನದ ಅಂಚಿನಲ್ಲಿದೆ ಮತ್ತು ಭಾರತದಲ್ಲಿ ಅದರ ಶಾಂತಿಯುತ ವಿನಾಶಕ್ಕೆ ಸಹಾಯ ಮಾಡುವುದು ನನ್ನ ಮಹತ್ವಾಕಾಂಕ್ಷೆಗಳಲ್ಲಿ ಒಂದಾಗಿದೆ" ಎಂಬ ಹೇಳಿಕೆಯನ್ನು ನೀಡಿದವರು ಯಾರು?

(1) ಲಾರ್ಡ್ ಲಿಟ್ಟನ್

Telegram : @GEOKING_18

(2) ಲಾರ್ಡ್ ಡಫರಿನ್
(3) ಲಾರ್ಡ್ ಹಾರ್ಡಿಂಜ್
(4) ಲಾರ್ಡ್ ಕರ್ಜನ್

25. ಕೃಷ್ಣದೇವರಾಯನ ಈ ಕೆಳಗಿನ ದಿಗ್ವಿಜಯಗಳನ್ನು ಪರಿಗಣಿಸಿ.

(a) ದೋಣಿ ಕಾಳಗ
(b) ಒರಿಸ್ಸಾದ ದಂಡಯಾತ್ರೆ
(c) ಗುಲ್ಬರ್ಗಾದ ಮುತ್ತಿಗೆ
(d) ವಿಜಯವಾಡದ ಮುತ್ತಿಗೆ

ಈ ಕೆಳಗಿನವುಗಳಲ್ಲಿ ಸರಿಯಾದ ಕಾಲಾನುಕ್ರಮ ಯಾವುದು?

(1) (c), (b), (d), (a)
(2) (b), (c), (a), (d)
(3) (a), (c), (b), (d)
(4) (c), (b), (a), (d)

ಕಚ್ಚಾ ಕೆಲಸಕ್ಕೆ ಸ್ಥಳ

Telegram : @GEOKING_18

26. ಮಹಮದ್ ಗವಾನನು ಯಾರಿಗೆ ಉತ್ತರಾಧಿಕಾರತ್ವದ ಯುದ್ಧದಲ್ಲಿ ನೆರವಾದನು?

(1) ಕಪಿಲೇಂದ್ರ ಗಜಪತಿ

(2) ಹಮ್ಮೀರದೇವ

(3) ಪುರುಷೋತ್ತಮ ಗಜಪತಿ

(4) ಶೈಲೇಂದ್ರ ಗಜಪತಿ

27. 'ಪ್ರಜಾ ಮಿತ್ರ ಮಂಡಳಿ'ಗೆ ಸಂಬಂಧಿಸಿದ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

(a) ಈ ಸಂಸ್ಥೆಯನ್ನು ಮೈಸೂರು ಸಂಸ್ಥಾನದಲ್ಲಿ 1919ರಲ್ಲಿ ಸ್ಥಾಪಿಸಲಾಯಿತು.

(b) ಇದು ಮದ್ರಾಸ್‌ನ ಜಸ್ಟೀಸ್ ಪಾರ್ಟಿಯಿಂದ ಪ್ರೇರಣೆಗೊಂಡಿತ್ತು.

(c) ಜವಾಬ್ದಾರಿ ಸರ್ಕಾರದ ಬೇಡಿಕೆಯನ್ನು ಇದು ಬೆಂಬಲಿಸಿತು.

(d) ಬ್ರಾಹ್ಮಣೇತರರಿಗೆ ಸರ್ಕಾರಿ ಸೇವೆಗಳಲ್ಲಿ ಹೆಚ್ಚು ಪ್ರಾತಿನಿಧ್ಯ ನೀಡಬೇಕೆಂದು ಮತ್ತು ಶಿಕ್ಷಣ ಸೌಲಭ್ಯಗಳನ್ನು ಹೆಚ್ಚಿಸಬೇಕೆಂದು ಬೇಡಿಕೆಯಿಟ್ಟಿತು.

ಮೇಲಿನ ಎಷ್ಟು ಹೇಳಿಕೆ/ಗಳು ಸರಿಯಾಗಿದೆ/ವೆ?

(1) ಒಂದು ಹೇಳಿಕೆ ಮಾತ್ರ ಸರಿ
(2) ಎರಡು ಹೇಳಿಕೆಗಳು ಮಾತ್ರ ಸರಿ
(3) ಮೂರು ಹೇಳಿಕೆಗಳು ಮಾತ್ರ ಸರಿ
(4) ನಾಲ್ಕೂ ಹೇಳಿಕೆಗಳು ಸರಿ

28. ಕದಂಬ ಅರಸರ ಸರಿಯಾದ ಕಾಲಾನುಕ್ರಮವನ್ನು ಗುರುತಿಸಿ.

(a) ಕಾಕುಸ್ಥವರ್ಮ

(b) ಮೃಗೇಶವರ್ಮ

(c) ಕಂಗವರ್ಮ

(d) ಮಯೂರವರ್ಮ

(1) (d), (c), (b), (a)
(2) (d), (c), (a), (b)
(3) (d), (a), (b), (c)
(4) (d), (b), (c), (a)

Telegram : @GEOKING_18

29. ದೀನದಯಾಳ್ ಅಂತ್ಯೋದಯ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್‌ನ ಗುರಿಗಳನ್ನು ಜಾರಿಗೊಳಿಸುವುದಕ್ಕಾಗಿ ಸಮುದಾಯ ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿ ನೀಡಲಾಗಿದೆ. ಈ ಕೆಳಗಿನವರಲ್ಲಿ ಯಾರು ಸ್ವಸಹಾಯ ಸಂಘದ (SHG) ತರಬೇತಿ ಪಡೆದ ಸಮುದಾಯ ಸಂಪನ್ಮೂಲ ವ್ಯಕ್ತಿಗಳಲ್ಲ (CRP)?

(1) ಕೃಷಿ ಸಖಿ
(2) ಗ್ರಾಮೀಣ ಸಖಿ
(3) ಪಶು ಸಖಿ
(4) ಬಿಮಾ ಸಖಿ

30. ಈ ಕೆಳಗಿನ ಸಮಿತಿ (ಪಟ್ಟಿ-I) ಗಳೊಂದಿಗೆ ಅವುಗಳ ಶಿಫಾರಸ್ಸುಗಳನ್ನು (ಪಟ್ಟಿ-II) ರೊಂದಿಗೆ ಸರಿಯಾಗಿ ಹೊಂದಿಸಿರಿ.

| ಪಟ್ಟಿ-I | ಪಟ್ಟಿ-II |
|---|---|
| (a) ಗೋವಿಂದರಾವ್ ಸಮಿತಿ | (i) ಕೃಷಿಕರ ಕಲ್ಯಾಣ ನಿಧಿ ಮತ್ತು ರೈತ ಸಂಜೀವಿನಿ ಆರೋಗ್ಯ ವಿಮೆಯನ್ನು ಜಾರಿಗೊಳಿಸಲು ಶಿಫಾರಸ್ಸು ಮಾಡಿತು. |
| (b) ನಿಜಲಿಂಗಪ್ಪ ಸಮಿತಿ | (ii) ಮಲೆನಾಡು ಮತ್ತು ಬಯಲುಸೀಮೆ ಪ್ರದೇಶ ಅಭಿವೃದ್ಧಿ ಮಂಡಳಿಗಳ ರದ್ದತಿಗೆ ಶಿಫಾರಸ್ಸು ಮಾಡಿತು. |
| (c) ಜಿ.ಕೆ ವೀರೇಶ್ ಸಮಿತಿ | (iii) ಅಚ್ಚುಕಟ್ಟು ಪ್ರದೇಶದ ರೈತರು ನೀರನ್ನು ಬಳಕೆ ಮಾಡದಿದ್ದರೂ ಕಾಲುವೆ ನಿರ್ವಹಣೆಗೆ ಕಡ್ಡಾಯ ಸೆಸ್ ಹಾಕಲು ಶಿಫಾರಸ್ಸು ಮಾಡಿತು. |
| (d) ನಂಜುಂಡಪ್ಪ ಸಮಿತಿ | (iv) ಪ್ರಾದೇಶಿಕ ಅಭಿವೃದ್ಧಿ ಮಂಡಳಿಗಳ ಸ್ಥಾಪನೆಗೆ ಶಿಫಾರಸ್ಸು ಮಾಡಿತು. |

ಸಂಕೇತಗಳು:

(1) a – ii, b – iii, c – i, d – iv
(2) a – i, b – ii, c – iii, d – iv
(3) a – iv, b – ii, c – i, d – iii
(4) a – iv, b – iii, c – ii, d – i

31. KITS - ವಿಸ್ತರಿಸಿ.

(1) ಕೆಂಪೇಗೌಡ ಇಂಡಸ್ಟ್ರಿಯಲ್ ಆ್ಯಂಡ್ ಟೆಕ್ನಿಕಲ್ ಸೊಸೈಟಿ
(2) ಕರ್ನಾಟಕ ಇನ್ನೋವೇಷನ್ ಆ್ಯಂಡ್ ಟೆಕ್ನಾಲಜಿ ಸೊಸೈಟಿ
(3) ಕರ್ನಾಟಕ ಇನ್ಸ್ಟಿಟ್ಯೂಟ್ ಫಾರ್ ಟ್ರಾನ್ಸ್‌ಫಾರ್ಮಿಂಗ್ ಸೊಸೈಟಿ
(4) ಕರ್ನಾಟಕ ಇಂಡಸ್ಟ್ರಿಯಲ್ ಆ್ಯಂಡ್ ಟೆಕ್ನಿಕಲ್ ಸೊಸೈಟಿ



Telegram : @GEOKING_18

32. ಆಹಾರ ಬೆಳೆಗಳ ಪೌಷ್ಠಿಕಾಂಶದ ಮೌಲ್ಯ ಸುಧಾರಣೆಯ ಪ್ರಕ್ರಿಯೆಯನ್ನು ಹೀಗೆನ್ನಲಾಗುತ್ತದೆ.

(1) ಬಯೋಇಂಜಿನಿಯರಿಂಗ್

(2) ಬಯೋಫೋರ್ಟಿಫಿಕೇಶನ್

(3) ಬಯೋಜೆನೆಟಿಕ್ಸ್

(4) ಬಯೋಇನ್‌ಫಾರ್ಮ್ಯಾಟಿಕ್ಸ್

33. 1961ರ ಕರ್ನಾಟಕ ಭೂ ಸುಧಾರಣಾ ಕಾಯ್ದೆಗೆ ಯಾವ ವರ್ಷದಲ್ಲಿ ಪ್ರಮುಖ ತಿದ್ದುಪಡಿಯನ್ನು ತರಲಾಯಿತು?

(1) 1974

(2) 1999

(3) 2026

(4) 2006

Telegram : @GEOKING_18

34. ಕರ್ನಾಟಕ ಭೂ ಸುಧಾರಣಾ ಕಾಯ್ದೆ, 1961ಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:

ಹೇಳಿಕೆ-I : ಸೆಕ್ಷನ್ 48(i)(ii) ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961ರನ್ವಯ ಕರ್ನಾಟಕ ಸರ್ಕಾರವು ತಾಲ್ಲೂಕು ಮಟ್ಟದಲ್ಲಿ ಭೂ ನ್ಯಾಯಮಂಡಳಿಗಳನ್ನು ರಚಿಸಲು ಅವಕಾಶ ಮಾಡಿಕೊಡುತ್ತದೆ.

ಹೇಳಿಕೆ-II : ತಾಲ್ಲೂಕು ಮಟ್ಟದಲ್ಲಿ ರಚಿಸಿದ ಭೂ ನ್ಯಾಯಮಂಡಳಿಗಳು ನಾಲ್ಕು ಜನ ಅಧಿಕಾರೇತರ ಸದಸ್ಯರನ್ನು ಒಳಗೊಂಡಿದ್ದು, ಅವರಲ್ಲಿ ಒಬ್ಬರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದವರು ಇರಬೇಕಾಗುತ್ತದೆ.

ಮೇಲಿನ ಯಾವ ಹೇಳಿಕೆ/ಗಳು ಸರಿಯಾಗಿದೆ/ವೆ?

(1) ಹೇಳಿಕೆ -I ಸರಿ, ಆದರೆ ಹೇಳಿಕೆ -II ತಪ್ಪು.

(2) ಹೇಳಿಕೆ -I ತಪ್ಪು, ಆದರೆ ಹೇಳಿಕೆ -II ಸರಿ.

(3) ಹೇಳಿಕೆ -I ಮತ್ತು ಹೇಳಿಕೆ -II ಎರಡೂ ಸರಿ.

Telegram : @GEOKING_18

(4) ಹೇಳಿಕೆ -I ಮತ್ತು ಹೇಳಿಕೆ -II ಎರಡೂ ತಪ್ಪು.

35. 2011ರ ಜನಗಣತಿಗೆ ಸಂಬಂಧಿಸಿದಂತೆ ಈ ಕೆಳಕಂಡ ಹೇಳಿಕೆಗಳನ್ನು ಪರಿಶೀಲಿಸಿ.

(a) 2011ರ ಜನಗಣತಿ ಪ್ರಕಾರ ಕರ್ನಾಟಕದ ಲಿಂಗಾನುಪಾತ 973

(b) 2011ರ ಜನಗಣತಿ ಪ್ರಕಾರ ಅತಿ ಹೆಚ್ಚು ಮಕ್ಕಳ ಲಿಂಗಾನುಪಾತ ಹೊಂದಿರುವ ಜಿಲ್ಲೆ ಉಡುಪಿ

(c) 2011ರ ಜನಗಣತಿ ಪ್ರಕಾರ ಅತಿ ಕಡಿಮೆ ಮಕ್ಕಳ ಲಿಂಗಾನುಪಾತ ಹೊಂದಿರುವ ಜಿಲ್ಲೆ ವಿಜಯಪುರ

(d) 2011ರ ಜನಗಣತಿ ಪ್ರಕಾರ ಅತಿ ಕಡಿಮೆ ಲಿಂಗಾನುಪಾತ ಹೊಂದಿರುವ ಜಿಲ್ಲೆ ಬೆಂಗಳೂರು ನಗರ

ಸರಿಯಾದ ಹೇಳಿಕೆ/ಗಳನ್ನು ಆಯ್ಕೆ ಮಾಡಿ.

(1) (a) ಮತ್ತು (b) ಮಾತ್ರ
(2) (b) ಮತ್ತು (c) ಮಾತ್ರ
(3) (a), (b) ಮತ್ತು (c) ಮಾತ್ರ
(4) (a), (c) ಮತ್ತು (d) ಮಾತ್ರ

36. ಭೂ ಸುಧಾರಣೆಗಳ ಪ್ರಮುಖ ಉದ್ದೇಶ/ಉದ್ದೇಶಗಳು.

(a) ಭೂ ಒಡೆತನವನ್ನು ಹಿಡುವಳಿದಾರನಿಂದ ಉಳುವವನಿಗೆ ವರ್ಗಾಯಿಸುವುದು.

(b) ಭೂ ಒಡೆತನವನ್ನು ಉಳುವವನಿಂದ ಹಿಡುವಳಿದಾರನಿಗೆ ವರ್ಗಾಯಿಸುವುದು.

(c) ಭೂ ಒಡೆತನವನ್ನು ಹಿಡುವಳಿದಾರನಿಂದ ಹಿಡುವಳಿದಾರನಿಗೆ ವರ್ಗಾಯಿಸುವುದು.

(d) ಭೂ ಒಡೆತನವನ್ನು ಉಳುವವನಿಂದ ಉಳುವವನಿಗೆ ವರ್ಗಾಯಿಸುವುದು.

(1) (a) ಮಾತ್ರ
(2) (b) ಮಾತ್ರ
(3) (a), (b) ಮತ್ತು (c) ಮಾತ್ರ
(4) (a), (b) ಮತ್ತು (d) ಮಾತ್ರ

Telegram : @GEOKING_18

37. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಹೇಳಿಕೆ-I : ಕರ್ನಾಟಕದ ಜಿಲ್ಲೆಗಳಾದ್ಯಂತ ಲಿಂಗ ಅಸಮಾನತೆ ಸೂಚ್ಯಂಕವು (GII) ಕಡಿಮೆ ವ್ಯತ್ಯಾಸವನ್ನು ಸೂಚಿಸುತ್ತದೆ.

ಹೇಳಿಕೆ-II : ಇದನ್ನು ಸ್ಥಳೀಯ ಮಟ್ಟದಲ್ಲಿ ಸಾಮಾಜಿಕ ಭಾಗವಹಿಸುವಿಕೆಗೆ ಲೆಕ್ಕ ಹಾಕಲಾಗುತ್ತದೆ.

ಮೇಲಿನ ಹೇಳಿಕೆಗಳಿಗೆ ಸಂಬಂಧಿಸಿದಂತೆ, ಸರಿಯಾದುದನ್ನು ಆರಿಸಿ.

(1) ಹೇಳಿಕೆ -I ಮತ್ತು ಹೇಳಿಕೆ -II ಎರಡೂ ಸರಿ ಮತ್ತು ಹೇಳಿಕೆ -II ಹೇಳಿಕೆ -I ನ್ನು ವಿವರಿಸುತ್ತದೆ.

(2) ಹೇಳಿಕೆ -I ಮತ್ತು ಹೇಳಿಕೆ -II ಎರಡೂ ಸರಿ, ಆದರೆ ಹೇಳಿಕೆ -II ಹೇಳಿಕೆ -I ನ್ನು ವಿವರಿಸುವುದಿಲ್ಲ.

(3) ಹೇಳಿಕೆ -I ಸರಿ, ಆದರೆ ಹೇಳಿಕೆ -II ತಪ್ಪು.

(4) ಹೇಳಿಕೆ -I ತಪ್ಪು, ಆದರೆ ಹೇಳಿಕೆ -II ಸರಿ.

---

ಕಚ್ಚಾ ಕೆಲಸಕ್ಕೆ ಸ್ಥಳ

Telegram : @GEOKING_18

38. ವರ್ಗೀಕೃತ ಬಡತನ ಅಂತರದ ಸೂಚ್ಯಂಕ ಏನನ್ನು ನಿರ್ಧರಿಸುತ್ತದೆ?

(a) ಪ್ರತಿಯೊಬ್ಬ ವ್ಯಕ್ತಿಯ ಬಡತನದ ಮಟ್ಟ

(b) ಸೂಚಿತ ಪ್ರದೇಶದ ಬಡತನದ ಮಟ್ಟ

(c) ಪ್ರತಿ ಕುಟುಂಬದ ಬಡತನದ ಮಟ್ಟ

(d) ಬಡತನ ಮತ್ತು ನಿರುದ್ಯೋಗದ ಮಟ್ಟ

ಮೇಲಿನ ಹೇಳಿಕೆಗಳಲ್ಲಿ ಯಾವುದು/ವು ಸರಿಯಾಗಿದೆ/ವೆ?

(1) (a), (b) ಮತ್ತು (c)
(2) (a), (c) ಮತ್ತು (d)
(3) (b), (c) ಮತ್ತು (d)
(4) (a), (b) ಮತ್ತು (d)

39. ಪಟ್ಟಿ-I ನ್ನು ಪಟ್ಟಿ-II ರ ಜೊತೆ ಹೊಂದಿಸಿ.

| ಪಟ್ಟಿ-I (ಮಂಡಳಿಗಳು) | ಪಟ್ಟಿ-II (ಸ್ಥಳಗಳು) |
|---|---|
| (a) ತೆಂಗು ಅಭಿವೃದ್ಧಿ ಮಂಡಳಿ | (i) ಗುರ್‌ಗಾಂವ್, ಹರಿಯಾಣ |
| (b) ರಾಷ್ಟ್ರೀಯ ತೋಟಗಾರಿಕಾ ಮಂಡಳಿ | (ii) ಕೊಚ್ಚಿ, ಕೇರಳ |
| (c) ರಾಷ್ಟ್ರೀಯ ಅರಿಶಿನ ಮಂಡಳಿ | (iii) ಗುಂಟೂರ್, ಆಂಧ್ರಪ್ರದೇಶ |
| (d) ತಂಬಾಕು ಮಂಡಳಿ | (iv) ನಿಜ಼ಾಮಾಬಾದ್, ತೆಲಂಗಾಣ |

ಸಂಕೇತಗಳು:

(1) a – i, b – ii, c – iii, d – iv

(2) a – ii, b – iii, c – i, d – iv

(3) a – iv, b – iii, c – ii, d – i

(4) a – ii, b – i, c – iv, d – iii

Telegram : @GEOKING_18

B2

40. ಪ್ರಧಾನ್ ಮಂತ್ರಿ ಅನ್ನದಾತಾ ಆಯ್ ಸಂರಕ್ಷಣ್ ಅಭಿಯಾನ್ (ಪಿ.ಎಂ.ಆಶಾ) ಯೋಜನೆಗೆ ಸಂಬಂಧಿಸಿದಂತೆ ಈ ಕೆಳಗಿನ ಸರಿಯಾದ ಹೇಳಿಕೆಗಳನ್ನು ಆರಿಸಿ.

(a) ಯೋಜನೆಯನ್ನು 2018ರಲ್ಲಿ ಜಾರಿಗೊಳಿಸಲಾಯಿತು.

(b) ಬೆಲೆ ಬೆಂಬಲ ಯೋಜನೆಯಾಗಿದೆ

(c) ಬೆಲೆ ಕೊರತೆ ಪಾವತಿ ಯೋಜನೆಯಾಗಿದೆ

(d) ಮಾರುಕಟ್ಟೆ ಮಧ್ಯ ಪ್ರವೇಶಿಸುವಿಕೆ ಯೋಜನೆಯಾಗಿದೆ

ಮೇಲಿನ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ?

(1) (b), (c) ಮತ್ತು (d)
(2) (a), (b) ಮತ್ತು (c)
(3) (a), (b), (c) ಮತ್ತು (d)
(4) (b) ಮತ್ತು (d)

Telegram : @GEOKING_18

41. ಜಾಗತಿಕ ಮಿಥೇನ್ ಪ್ರತಿಜ್ಞೆ (GMP)ಯು, ಮಿಥೇನ್ ಹೊರಸೂಸುವಿಕೆಯನ್ನು 2020 ರ ಮಟ್ಟದಿಂದ 2030 ರ ವೇಳೆಗೆ __________ ರಷ್ಟು ಕಡಿತಗೊಳಿಸುವ ಗುರಿ ಹೊಂದಿದೆ.

(1) ಶೇಕಡಾ 80

(2) ಶೇಕಡಾ 40

(3) ಶೇಕಡಾ 50

(4) ಶೇಕಡಾ 30

42. 2025-26 ರಲ್ಲಿ ಭಾರತವು ದ್ವಿದಳ ಧಾನ್ಯಗಳ ಉತ್ಪಾದನೆಯನ್ನು ಹೆಚ್ಚಿಸಲು ಯಾವ ದೀರ್ಘಾವಧಿಯ ಅಭಿಯಾನವನ್ನು ಘೋಷಿಸಿತು?

(1) 9 ವರ್ಷಗಳ ದ್ವಿದಳ ಧಾನ್ಯ ಅಭಿಯಾನ

(2) 6 ವರ್ಷಗಳ ದ್ವಿದಳ ಧಾನ್ಯ ಅಭಿಯಾನ

(3) 10 ವರ್ಷಗಳ ದ್ವಿದಳ ಧಾನ್ಯ ಅಭಿಯಾನ

(4) 7 ವರ್ಷಗಳ ದ್ವಿದಳ ಧಾನ್ಯ ಅಭಿಯಾನ

Telegram : @GEOKING_18

43. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಹೇಳಿಕೆ-I : ಸಾಲ ಮನ್ನಾ ಮಾತ್ರ ಸುಸ್ಥಿರ ಕೃಷಿ ಅಭಿವೃದ್ಧಿಯನ್ನು ಖಚಿತಪಡಿಸುತ್ತದೆ.

ಹೇಳಿಕೆ-II : ಸುಸ್ಥಿರ ಕೃಷಿ ಅಭಿವೃದ್ಧಿಯು ಉತ್ಪಾದಕತೆ, ಮೂಲಭೂತ ಸೌಕರ್ಯ, ತಂತ್ರಜ್ಞಾನ ಮತ್ತು ಮಾರುಕಟ್ಟೆ ಲಭ್ಯತೆಯನ್ನು ಅವಲಂಬಿಸಿದೆ.

ಮೇಲೆ ನೀಡಿರುವ ಹೇಳಿಕೆಗಳಿಗೆ ಸಂಬಂಧಿಸಿದಂತೆ, ಈ ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

(1) ಹೇಳಿಕೆ -I ಮತ್ತು ಹೇಳಿಕೆ -II ಎರಡೂ ಸರಿಯಾಗಿವೆ.

(2) ಹೇಳಿಕೆ -I ಸರಿಯಾಗಿದೆ, ಆದರೆ ಹೇಳಿಕೆ -II ತಪ್ಪಾಗಿದೆ.

(3) ಹೇಳಿಕೆ -II ಸರಿಯಾಗಿದೆ, ಆದರೆ ಹೇಳಿಕೆ -I ತಪ್ಪಾಗಿದೆ.

(4) ಹೇಳಿಕೆ -I ಮತ್ತು ಹೇಳಿಕೆ -II ಎರಡೂ ತಪ್ಪಾಗಿವೆ.

44. ಈ ಕೆಳಗಿನವುಗಳಿಂದ ಸರಿಯಾದ ಹೇಳಿಕೆಯನ್ನು ಆರಿಸಿ.

(1) ತಿಮ್ಮಪ್ಪನಗುಡಿ ಕಬ್ಬಿಣದ ಅದಿರು ಗಣಿಗಾರಿಕಾ ಕೇಂದ್ರವು ತುಮಕೂರು ಜಿಲ್ಲೆಯಲ್ಲಿದೆ.

(2) ಜಾನಿಕುಂಟ ಕಬ್ಬಿಣದ ಅದಿರು ಗಣಿಗಾರಿಕಾ ಕೇಂದ್ರವು ಬಳ್ಳಾರಿ ಜಿಲ್ಲೆಯಲ್ಲಿದೆ.

(3) ದೋಣಿಮಲೈ ಕಬ್ಬಿಣದ ಅದಿರು ಗಣಿಗಾರಿಕಾ ಕೇಂದ್ರವು ಕಲ್ಬುರ್ಗಿಯಲ್ಲಿದೆ.

(4) ಕಲ್ಲೂರು ಸುಣ್ಣದ ಕಲ್ಲು ಗಣಿಯು ಬಳ್ಳಾರಿಯಲ್ಲಿದೆ.

Telegram : @GEOKING_18

45. ಈ ಕೆಳಗಿನ ಜೋಡಿಗಳನ್ನು ಪರಿಗಣಿಸಿ.

| ಉಷ್ಣ ವಿದ್ಯುತ್ ಸ್ಥಾವರಗಳು | | ನೆಲೆಗೊಂಡಿರುವ ಜಿಲ್ಲೆ |
|---|---|---|
| (a) ಅಣ್ಣೆಚಾಕನಹಳ್ಳಿ | - | ಹಾಸನ |
| (b) ಕಲ್ಕುಣಿಕೆ | - | ಬಳ್ಳಾರಿ |
| (c) ಹನಕೋಣ | - | ಉತ್ತರ ಕನ್ನಡ |

ಇವುಗಳಲ್ಲಿ ಸರಿಯಾಗಿ ಹೊಂದಾಣಿಕೆಯಾಗಿರುವ ಜೋಡಿ/ಗಳು ಯಾವುದು/ವು?

(1) (a) ಮಾತ್ರ
(2) (a) ಮತ್ತು (c) ಮಾತ್ರ
(3) (c) ಮಾತ್ರ
(4) (a), (b) ಮತ್ತು (c)

Telegram : @GEOKING_18

46. ಕರ್ನಾಟಕದ ಕರಾವಳಿಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ.

ಹೇಳಿಕೆ-I : ಕರ್ನಾಟಕದ ಕರಾವಳಿಯನ್ನು ಮ್ಯಾಕರಲ್ ಕರಾವಳಿ ಎಂದು ಕರೆಯುತ್ತಾರೆ.

ಹೇಳಿಕೆ-II : ಕರ್ನಾಟಕದ ಕರಾವಳಿಯಲ್ಲಿ ಮ್ಯಾಕರಲ್ ಮೀನುಗಳು ಹೆಚ್ಚಾಗಿವೆ.

ಈ ಮೇಲಿನವುಗಳಲ್ಲಿ ಸರಿಯಾದ ಹೇಳಿಕೆ/ಗಳನ್ನು ಆರಿಸಿ.

(1) ಹೇಳಿಕೆ -I ಮಾತ್ರ ಸರಿಯಾಗಿದೆ.

(2) ಹೇಳಿಕೆ -I ಮತ್ತು ಹೇಳಿಕೆ -II ಎರಡೂ ಸರಿಯಾಗಿವೆ.

(3) ಹೇಳಿಕೆ -I ಸರಿಯಾಗಿದೆ, ಆದರೆ ಹೇಳಿಕೆ -II ತಪ್ಪಾಗಿದೆ.

(4) ಹೇಳಿಕೆ -II ಸರಿಯಾಗಿದೆ, ಆದರೆ ಹೇಳಿಕೆ -I ತಪ್ಪಾಗಿದೆ.

47. IIHR ಸಂಸ್ಥೆಯು ಈ ಕೆಳಕಂಡ ಯಾವ ನಗರದಲ್ಲಿದೆ?

(1) ಬೆಂಗಳೂರು

(2) ಹುಬ್ಬಳ್ಳಿ

(3) ಬಾಗಲಕೋಟೆ

(4) ಮೈಸೂರು

Telegram : @GEOKING_18

48. ಈ ಕೆಳಗಿನ ಕೃಷಿ ಮಧ್ಯ ಪ್ರವೇಶಿಕೆಗಳನ್ನು ಪರಿಗಣಿಸಿ.

(a) ಬೆಳೆ ವೈವಿಧ್ಯೀಕರಣ

(b) ಕನಿಷ್ಠ ಉಳುಮೆ

(c) ಅವಶೇಷ ಉಳಿಸಿಕೊಳ್ಳುವಿಕೆ

(d) ಹವಾಮಾನಾಧಾರಿತ ವಿಮೆ

(e) ಸಮುದಾಯ ವ್ಯವಸಾಯ

ಮೇಲಿನ ಮಧ್ಯ ಪ್ರವೇಶಿಕೆಗಳಲ್ಲಿ ಯಾವುದನ್ನು ಭಾರತದ 'ಕ್ಲೈಮೇಟ್ ಸ್ಮಾರ್ಟ್ ವಿಲೇಜ್ ವಿಧಾನ'ದಲ್ಲಿ ಬಳಸಲಾಗಿದೆ?

(1) (a), (c), (d) ಮತ್ತು (e)
(2) (b), (c), (d) ಮತ್ತು (e)
(3) (a), (b), (c) ಮತ್ತು (d)
(4) (a), (b), (d) ಮತ್ತು (e)

Telegram : @GEOKING_18

49. ದಕ್ಷಿಣ ಭಾರತದಲ್ಲಿ ಬೇಸಿಗೆಯಲ್ಲಿ ಸುರಿಯುವ ಮಳೆಯನ್ನು ಕಾಫಿ ಬ್ಲಾಸಮ್ಸ್ ಮಳೆ ಎಂದು ಕರೆಯುವರು. ಈ ಬೇಸಿಗೆಯ ಮಳೆಯನ್ನು ಏನೆಂದು ಕರೆಯುತ್ತಾರೆ?

(1) ಪರ್ವತಜನಿತ ಮಳೆ

(2) ಸಂವಹನ ಮಳೆ

(3) ಚಂಡಮಾರುತ ಮಳೆ

(4) ಮಾನ್ಸೂನ್ ಮಳೆ

50. ಕೆಳಗೆ ಕೊಟ್ಟಿರುವ ಕಬ್ಬಿಣದ ಅದಿರಿನ ವಿಧಗಳನ್ನು ಅವುಗಳು ಹೊಂದಿರುವ ಕಬ್ಬಿಣಾಂಶದ ಆಧಾರದ ಮೇಲೆ ಏರಿಕೆ ಕ್ರಮದಲ್ಲಿ ಬರೆಯಿರಿ.

(a) ಹೆಮಟೈಟ್

(b) ಸಿಡರೈಟ್

(c) ಮ್ಯಾಗ್ನಟೈಟ್

(d) ಲಿಮೊನೈಟ್

Telegram : @GEOKING_18

(1) (a), (b), (c), (d)

(2) (b), (d), (a), (c)

(3) (d), (b), (c), (a)

(4) (b), (a), (d), (c)

51. ಸುವರ್ಣರೇಖಾ ನದಿಯಿಂದ ದಕ್ಷಿಣದ ಋಷಿಕುಲ್ಯಾ ನದಿಯವರೆಗಿನ ಕರಾವಳಿ ಬಯಲು ಪ್ರದೇಶವನ್ನು ______ ಎಂದು ಕರೆಯುತ್ತಾರೆ.

(1) ತಮಿಳುನಾಡು ಬಯಲು

(2) ಆಂಧ್ರ ಬಯಲು

(3) ಉತ್ಕಲ ಬಯಲು

Telegram : @GEOKING_18

(4) ಮಲಬಾರ್ ಬಯಲು

52. ಭಾರತದ ರೈಲ್ವೆಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಹೇಳಿಕೆ-I : ಜನಸಂಖ್ಯೆ ಹೆಚ್ಚಳ, ಕೈಗಾರಿಕೀಕರಣ ಮತ್ತು ನಗರೀಕರಣದ ಹೆಚ್ಚಳದೊಂದಿಗೆ, ರೈಲುಗಳ ಮೇಲೆ ಪ್ರಯಾಣಿಕರು ಮತ್ತು ಸರಕು ಸಾಗಾಣಿಕೆಯಿಂದ ಹೆಚ್ಚಿನ ಒತ್ತಡ ಉಂಟಾಗಿದೆ.

ಹೇಳಿಕೆ-II : ರೈಲ್ವೆಯು ರಸ್ತೆ ಸಾರಿಗೆಯಿಂದ ತೀವ್ರ ಪೈಪೋಟಿಯನ್ನು ಎದುರಿಸುತ್ತಿದೆ.

ಮೇಲಿನ ಹೇಳಿಕೆಗಳಿಗೆ ಸಂಬಂಧಿಸಿದಂತೆ ಕೆಳಗಿನವುಗಳಲ್ಲಿ ಯಾವುದು ಸರಿ?

(1) ಹೇಳಿಕೆ -I ಮತ್ತು ಹೇಳಿಕೆ -II ಎರಡೂ ಸರಿ ಮತ್ತು ಹೇಳಿಕೆ-II ಹೇಳಿಕೆ-I ಅನ್ನು ವಿವರಿಸುತ್ತದೆ.

(2) ಹೇಳಿಕೆ -I ಮತ್ತು ಹೇಳಿಕೆ -II ಎರಡೂ ಸರಿ, ಆದರೆ ಹೇಳಿಕೆ-II ಹೇಳಿಕೆ-I ಅನ್ನು ವಿವರಿಸುವುದಿಲ್ಲ.

(3) ಹೇಳಿಕೆ -I ಸರಿ, ಆದರೆ ಹೇಳಿಕೆ -II ತಪ್ಪು.

(4) ಹೇಳಿಕೆ -I ತಪ್ಪು, ಆದರೆ ಹೇಳಿಕೆ -II ಸರಿ.

Telegram : @GEOKING_18

53. ಪಟ್ಟಿ-I ನ್ನು ಪಟ್ಟಿ-II ರ ಜೊತೆ ಹೊಂದಿಸಿ, ಸರಿಯಾದ ಉತ್ತರವನ್ನು ಆರಿಸಿ.

| ಪಟ್ಟಿ-I (ಸ್ಥಳ) | | ಪಟ್ಟಿ-II (ಜವಳಿ ಕೈಮಗ್ಗ) | |
|---|---|---|---|
| (a) | ಢಾಕಾ | (i) | ಕ್ಯಾಲಿಕೋ |
| (b) | ಮಚಲಿಪಟ್ಟಣಂ | (ii) | ಚಿಂಟ್ಸ್ |
| (c) | ಕಾಲಿಕಟ್ | (iii) | ಮಸ್ಲಿನ್ |
| (d) | ಬರೋಡಾ | (iv) | ಬಾಫ್ತಾನ್ |

ಸಂಕೇತಗಳು:

(1) a – i, b – ii, c – iii, d – iv
(2) a – ii, b – iii, c – iv, d – i
(3) a – iii, b – iv, c – ii, d – i
(4) a – iii, b – ii, c – i, d – iv

Telegram : @GEOKING_18

54. ಮಾಲಿನ್ಯಕ್ಕೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ.

(a) ಜಲಮಾಲಿನ್ಯವನ್ನು ನೀರಿನಲ್ಲಿ ಕರಗಿರುವ ಆಮ್ಲಜನಕದ ಪ್ರಮಾಣದಿಂದ ಅಳೆಯಲಾಗುತ್ತದೆ.

(b) ವಾಯುಮಾಲಿನ್ಯವನ್ನು 'ಗಾಳಿಯ ಗುಣಮಟ್ಟ ಸೂಚ್ಯಂಕ'ದಿಂದ ಅಳೆಯಲಾಗುತ್ತದೆ.

(c) ಶಬ್ದಮಾಲಿನ್ಯವನ್ನು ಡೆಸಿಬಲ್‌ಗಳಲ್ಲಿ ಅಳೆಯಲಾಗುತ್ತದೆ.

(d) ಮಣ್ಣಿನ ಮಾಲಿನ್ಯವನ್ನು ಮರಳಿನ ಮಾದರಿಗಳನ್ನು ಪರೀಕ್ಷಿಸುವ ಮೂಲಕ ಅಳೆಯಲಾಗುತ್ತದೆ.

ಕೆಳಗಿನ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ.

(1) (a), (b) ಮತ್ತು (d)
(2) (a), (b) ಮತ್ತು (c)
(3) (b), (c) ಮತ್ತು (d)
(4) (a), (c) ಮತ್ತು (d)

55. ಈ ಕೆಳಗಿನ ಜೋಡಿಗಳನ್ನು ಪರಿಗಣಿಸಿ.

| ಕಾರ್ಯಕ್ರಮಗಳು | | ಉದ್ದೇಶಿತ ಪ್ರದೇಶಗಳು |
|---|---|---|
| (a) ಗ್ರೇಟ್ ಗ್ರೀನ್ ವಾಲ್ | – | ಸಹಾರಾ ಮತ್ತು ಸಾಹೇಲ್ |
| (b) ಕ್ಲೈಮೇಟ್ ಸ್ಮಾರ್ಟ್ ವಿಲೇಜಸ್ | – | ಭಾರತ |
| (c) ಝ್ಯು ಮತ್ತು ನ್ಗಾರೋ | – | ಸಮಭಾಜಕ ವೃತ್ತ ಪ್ರದೇಶ |

ಮೇಲಿನ ಜೋಡಿಗಳಲ್ಲಿ ಯಾವ ಜೋಡಿ/ಜೋಡಿಗಳು ಸರಿಯಾಗಿ ಹೊಂದಿಕೆಯಾಗಿದೆ/ವೆ?

(1) (a) ಮಾತ್ರ
(2) (a) ಮತ್ತು (b) ಮಾತ್ರ
(3) (b) ಮತ್ತು (c) ಮಾತ್ರ
(4) (a), (b) ಮತ್ತು (c)

Telegram : @GEOKING_18

56. ಈ ಕೆಳಗಿನವುಗಳಲ್ಲಿ ಭಾರತದ ಜೀವವೈವಿಧ್ಯತೆಯ ಹಾಟ್‌ಸ್ಪಾಟ್‌ಗಳನ್ನು ಗುರುತಿಸಿ.

(a) ಹಿಮಾಲಯ

(b) ಇಂಡೋ-ಬರ್ಮಾ

(c) ಪೂರ್ವ ಘಟ್ಟಗಳು

(d) ಪಶ್ಚಿಮ ಘಟ್ಟಗಳು

(1) (a), (b) ಮತ್ತು (d)
(2) (a), (b) ಮತ್ತು (c)
(3) (b), (c) ಮತ್ತು (d)
(4) (a), (c) ಮತ್ತು (d)

ಕಚ್ಚಾ ಕೆಲಸಕ್ಕೆ ಸ್ಥಳ

Telegram : @GEOKING_18

57. GBRMPA - ವಿಸ್ತರಿಸಿ.

(1) ಗ್ರೇಟ್ ಬ್ಯಾರಿಯರ್ ರೀಫ್ ಮರೀನ್ ಪಾರ್ಕ್ ಏಜೆನ್ಸಿ

(2) ಗ್ರೇಟ್ ಬ್ಯಾರಿಯರ್ ರೀಫ್ ಮರೀನ್ ಪ್ರೊಟೆಕ್ಷನ್ ಅಸೋಸಿಯೇಷನ್

(3) ಗ್ರೇಟ್ ಬ್ಯಾರಿಯರ್ ರೀಫ್ ಮರೀನ್ ಪಾರ್ಕ್ ಅಥಾರಿಟಿ

(4) ಗ್ರೇಟ್ ಬ್ಯಾರಿಯರ್ ರೀಫ್ ಮ್ಯಾನೇಜ್‌ಮೆಂಟ್ ಆ್ಯಂಡ್ ಪ್ಲ್ಯಾನಿಂಗ್ ಅಥಾರಿಟಿ

58. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

(a) ಗಾಳಿಯಲ್ಲಿರುವ ಮಣ್ಣು/ಧೂಳು ವಾತಾವರಣದ ಸೀಸದ ದ್ವಿತೀಯ ಮೂಲವಾಗಿದೆ.

(b) ಕಲ್ಲಿದ್ದಲು ಮತ್ತು ಇಂಧನ ತೈಲದ ದಹನದಿಂದ ಬರುವ ಹಾರುಬೂದಿಯು ಸುತ್ತಲಿರುವ ಗಾಳಿಯಲ್ಲಿನ ಕಬ್ಬಿಣದ ಮೂಲಗಳಾಗಿವೆ.

ಮೇಲಿನವುಗಳಲ್ಲಿ ಯಾವುದು/ವು ಸರಿಯಾಗಿದೆ/ವೆ?

(1) (a) ಮಾತ್ರ
(2) (b) ಮಾತ್ರ
(3) (a) ಮತ್ತು (b) ಗಳೆರಡೂ ಸರಿಯಾಗಿವೆ
(4) (a) ಮತ್ತು (b) ಎರಡೂ ಸರಿಯಾಗಿಲ್ಲ

Telegram : @GEOKING_18

59. ಪಟ್ಟಿ-I ಅನ್ನು ಪಟ್ಟಿ-II ರ ಜೊತೆ ಹೊಂದಿಸಿ, ಸರಿಯಾದ ಉತ್ತರವನ್ನು ಆರಿಸಿ.

| | ಪಟ್ಟಿ-I (ಭೂಕಂಪನ ಅಲೆಗಳು) | | ಪಟ್ಟಿ-II (ನಿರ್ದಿಷ್ಟತೆಗಳು) |
|---|---|---|---|
| (a) | P-ಅಲೆಗಳು | (i) | ಭೂಕಂಪನಾ ಹೊರಕೇಂದ್ರ |
| (b) | ಮೇಲ್ಮೈ ಅಲೆಗಳು | (ii) | ಊರ್ಧ್ವಮುಖ ಅಲೆಗಳು |
| (c) | ಬಂದರು ಅಲೆಗಳು | (iii) | ಅಡ್ಡ ಅಲೆಗಳು |
| (d) | S-ಅಲೆಗಳು | (iv) | ಸುನಾಮಿ |

ಸಂಕೇತಗಳು:

(1) a – iv, b – iii, c – i, d – ii
(2) a – ii, b – i, c – iv, d – iii
(3) a – i, b – iv, c – iii, d – ii
(4) a – iii, b – ii, c – iv, d – i

ಕಚ್ಚಾ ಕೆಲಸಕ್ಕೆ ಸ್ಥಳ

Telegram : @GEOKING_18

60. ಕೆಳಗಿನವುಗಳಲ್ಲಿ ಸರಿಯಾದ ಜೋಡಣೆಯನ್ನು ಗುರುತಿಸಿ.

| ಜಲಾನಯನ ವ್ಯವಸ್ಥೆ | | ಉದಾಹರಣೆಗಳು |
|---|---|---|
| (a) ಆಯತಾಕಾರ ವಿನ್ಯಾಸ | - | ಶ್ಯಾಮಕ ಬೆಟ್ಟ |
| (b) ವೃಕ್ಷ ವಿನ್ಯಾಸ | - | ಗಿರಿದಿಹ್ |
| (c) ಜಾಲಾಕಾರ ವಿನ್ಯಾಸ | - | ಅರಾವಳಿ ಬೆಟ್ಟ |
| (d) ವಲಯಾಕಾರ ವಿನ್ಯಾಸ | - | ಗಿರ್‌ನಾರ್ ಬೆಟ್ಟ |

ಕೆಳಗಿನ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ.

(1) (a), (b), (c) ಮತ್ತು (d)
(2) (a), (b) ಮತ್ತು (c)
(3) (a) ಮತ್ತು (c)
(4) (a) ಮತ್ತು (d)

61. ತ್ರಿ ಗಾರ್ಜಸ್ ಅಣೆಕಟ್ಟಿಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಹೇಳಿಕೆ-I : ತ್ರಿಗಾರ್ಜಸ್ ಅಣೆಕಟ್ಟನ್ನು ಮಧ್ಯ ಚೀನಾದಲ್ಲಿ ಯಾಂಗ್ಸೆ ನದಿಯ ಮೇಲೆ ಪ್ರಮುಖವಾಗಿ ಅಳಿವಿನಂಚಿನಲ್ಲಿರುವ ಜಲ ಪ್ರಭೇದಗಳ ವಾಸಸ್ಥಳ ಅಭಿವೃದ್ಧಿಗಾಗಿ ನಿರ್ಮಿಸಲಾಗಿದೆ.

ಹೇಳಿಕೆ-II : ಈ ಅಣೆಕಟ್ಟಿನ ನಿರ್ಮಾಣವು ಮಾನವ ವಸತಿಗಳ ಸ್ಥಳಾಂತರ ಮತ್ತು ಹೆಚ್ಚಿದ ಭೂ ಸವೆತವನ್ನು ಒಳಗೊಂಡಂತೆ ಹಲವಾರು ಋಣಾತ್ಮಕ ಪರಿಸರ ಪ್ರಭಾವಗಳಿಗೆ ಕಾರಣವಾಗಿದೆ.

ಮೇಲಿನ ಹೇಳಿಕೆಗಳಿಗೆ ಸಂಬಂಧಿಸಿದಂತೆ ಕೆಳಗಿನವುಗಳಲ್ಲಿ ಯಾವುದು ಸರಿ?

(1) ಹೇಳಿಕೆ -I ಮತ್ತು ಹೇಳಿಕೆ -II ಎರಡೂ ಸರಿ ಮತ್ತು ಹೇಳಿಕೆ-II ಹೇಳಿಕೆ-I ಅನ್ನು ವಿವರಿಸುತ್ತದೆ.
(2) ಹೇಳಿಕೆ -I ಮತ್ತು ಹೇಳಿಕೆ -II ಎರಡೂ ಸರಿ, ಆದರೆ ಹೇಳಿಕೆ-II ಹೇಳಿಕೆ-I ಅನ್ನು ವಿವರಿಸುವುದಿಲ್ಲ .
(3) ಹೇಳಿಕೆ -I ಸರಿ, ಆದರೆ ಹೇಳಿಕೆ -II ತಪ್ಪು.
(4) ಹೇಳಿಕೆ -I ತಪ್ಪು, ಆದರೆ ಹೇಳಿಕೆ -II ಸರಿ.

ಕಚ್ಚಾ ಕೆಲಸಕ್ಕೆ ಸ್ಥಳ

Telegram : @GEOKING_18

62. ಪಟ್ಟಿ-I ಅನ್ನು ಪಟ್ಟಿ-II ರ ಜೊತೆ ಹೊಂದಿಸಿ, ಸರಿಯಾದ ಉತ್ತರವನ್ನು ಆರಿಸಿ.

| ಪಟ್ಟಿ-I (ಸ್ಥಳಾಂತರ ಬೇಸಾಯ) | | ಪಟ್ಟಿ-II (ರಾಜ್ಯಗಳು) | |
|---|---|---|---|
| (a) | ಜೂಮ್ | (i) | ಕೇರಳ |
| (b) | ಕೋಮನ್ | (ii) | ಒಡಿಶಾ |
| (c) | ಪೊನಮ್ | (iii) | ಆಂಧ್ರಪ್ರದೇಶ |
| (d) | ಕುಮ್ರಿ | (iv) | ಅಸ್ಸಾಮ್ |

ಸಂಕೇತಗಳು:

(1) a – iv, b – ii, c – i, d – iii

(2) a – iv, b – i, c – ii, d – iii

(3) a – i, b – ii, c – iv, d – iii

(4) a – iii, b – i, c – ii, d – iv

63. ವಾಣಿಜ್ಯ ಮಾರುತಗಳು ಬೀಸುವ ದಿಕ್ಕು

(1) ಉಪ ಉಷ್ಣವಲಯದ ಅಧಿಕ ಒತ್ತಡ ಪಟ್ಟಿಯಿಂದ ಸಮಭಾಜಕ ವೃತ್ತದ ಕಡಿಮೆ ಒತ್ತಡ ಪಟ್ಟಿ ಕಡೆಗೆ

(2) ಉಷ್ಣವಲಯದ ಅಧಿಕ ಒತ್ತಡ ಪಟ್ಟಿಯಿಂದ ಉಪ ಉಷ್ಣವಲಯದ ಕಡಿಮೆ ಒತ್ತಡ ಪಟ್ಟಿ ಕಡೆಗೆ

(3) ಉಪ ಉಷ್ಣವಲಯದ ಕಡಿಮೆ ಒತ್ತಡ ಪಟ್ಟಿಯಿಂದ ಸಮಭಾಜಕ ವೃತ್ತದ ಅಧಿಕ ಒತ್ತಡ ಪಟ್ಟಿ ಕಡೆಗೆ

(4) ಸಮಭಾಜಕ ವೃತ್ತದ ಅಧಿಕ ಒತ್ತಡ ಪಟ್ಟಿಯಿಂದ ಉಪ ಉಷ್ಣವಲಯದ ಕಡಿಮೆ ಒತ್ತಡ ಪಟ್ಟಿ ಕಡೆಗೆ

Telegram : @GEOKING_18

64. ಕರ್ನಾಟಕದಲ್ಲಿ ಈ ಕೆಳಗಿನ ಯಾವ ನದಿ ಜಲಾನಯನ ಪ್ರದೇಶಗಳಲ್ಲಿ ಸಕ್ಕರೆ ಕಾರ್ಖಾನೆಗಳ ಅತೀ ಹೆಚ್ಚಿನ ಸಾಂದ್ರೀಕರಣ ಕಂಡು ಬರುತ್ತದೆ?

(a) ಕೃಷ್ಣಾ, ತುಂಗಭದ್ರಾ ಮತ್ತು ಕಾವೇರಿ ನದಿ ಜಲಾನಯನ ಪ್ರದೇಶಗಳು

(b) ಪೆನ್ನಾರ್, ಪಾಲಾರ್ ಮತ್ತು ಭೀಮಾವತಿ ನದಿ ಜಲಾನಯನ ಪ್ರದೇಶಗಳು

(c) ಶರಾವತಿ, ಗಂಗಾವಳಿ ಮತ್ತು ಹೇಮಾವತಿ ನದಿ ಜಲಾನಯನ ಪ್ರದೇಶಗಳು

(d) ನೇತ್ರಾವತಿ, ಗಂಗಾವಳಿ ಮತ್ತು ಅಘನಾಶಿನಿ ನದಿ ಜಲಾನಯನ ಪ್ರದೇಶಗಳು

ಕೆಳಗಿನ ಸಂಕೇತಗಳನ್ನು ಬಳಸಿ ಸರಿಯಾದ ಉತ್ತರವನ್ನು ಆರಿಸಿ.

(1) (a) ಮಾತ್ರ

(2) (a) ಮತ್ತು (d) ಮಾತ್ರ

(3) (b) ಮಾತ್ರ

(4) (a) ಮತ್ತು (c) ಮಾತ್ರ

ಕಚ್ಚಾ ಕೆಲಸಕ್ಕೆ ಸ್ಥಳ

Telegram : @GEOKING_18

65. ಪಶ್ಚಿಮ ಘಟ್ಟಗಳ ಪ್ರವಾಸಿತಾಣಗಳಿಗೆ ಸಂಬಂಧಿಸಿದಂತೆ, ಈ ಕೆಳಗಿನ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ.

(a) ಕೆಮ್ಮಣ್ಣುಗುಂಡಿಯು ಕೃಷ್ಣರಾಜ ಒಡೆಯರ್ ಪರ್ವತವೆಂದೂ ಪರಿಚಿತವಾಗಿದೆ.

(b) 'ಲಕ್ಯಾಡ್ಯಾಮ್'ನ್ನು ಕುದುರೆಮುಖ ಕಬ್ಬಿಣ ಅದಿರು ಕಂಪೆನಿ ಲಿಮಿಟೆಡ್ ನಿರ್ಮಿಸಿದೆ.

(c) ಮೂರು ಪ್ರಮುಖ ನದಿಗಳಾದ ತುಂಗಾ, ಭದ್ರಾ ಮತ್ತು ಶರಾವತಿ ನದಿಗಳು ಗಂಗಾಮೂಲದಲ್ಲಿ ಉಗಮವಾಗುತ್ತವೆ.

(d) ಪ್ರಸಿದ್ಧ 'ಸಾತೋಡ್ಡಿ' ಜಲಪಾತವು ಉತ್ತರ ಕನ್ನಡದಲ್ಲಿದೆ.

(1) (a) ಮತ್ತು (b) ಮಾತ್ರ ಸರಿ

(2) (b), (c) ಮತ್ತು (d) ಸರಿ

(3) (a), (b) ಮತ್ತು (c) ಸರಿ

(4) (a), (b) ಮತ್ತು (d) ಸರಿ

66. ಬಲವಂತರಾಯ ಮೆಹ್ತಾ ಸಮಿತಿಯ ಶಿಫಾರಸ್ಸುಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಯಾವ ಹೇಳಿಕೆಗಳು ತಪ್ಪಾಗಿವೆ?

(a) ಜಿಲ್ಲಾಧಿಕಾರಿಯು ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾಗಿರಬೇಕು.

(b) ಜಿಲ್ಲಾ ಪರಿಷತ್ ಕಾರ್ಯನಿರ್ವಹಣಾ ಅಂಗವಾಗಿರಬೇಕು.

(c) ಪಂಚಾಯತ್ ಸಮಿತಿ ಹಾಗೂ ಜಿಲ್ಲಾ ಪರಿಷತ್‌ಗಳು ಪ್ರತ್ಯಕ್ಷವಾಗಿ ಚುನಾಯಿತರಾದ ಸದಸ್ಯರಿಂದ ರಚನೆಯಾಗಿರಬೇಕು.

(d) ಗ್ರಾಮ ಪಂಚಾಯಿತಿಯು ಪರೋಕ್ಷವಾಗಿ ಚುನಾಯಿತರಾದ ಸದಸ್ಯರಿಂದ ರಚನೆಯಾಗಿರಬೇಕು.

(1) (a), (b) ಮತ್ತು (c)

(2) (a), (c) ಮತ್ತು (d)

(3) (b), (c) ಮತ್ತು (d)

(4) (a), (b), (c) ಮತ್ತು (d)

ಕಚ್ಚಾ ಕೆಲಸಕ್ಕೆ ಸ್ಥಳ

Telegram : @GEOKING_18

67. ಪಟ್ಟಿ-Iನ್ನು ಪಟ್ಟಿ-II ರೊಂದಿಗೆ ಹೊಂದಿಸಿ, ಸರಿಯಾದ ಉತ್ತರವನ್ನು ನೀಡಿ.

| ಪಟ್ಟಿ-I (ವಿಷಯಗಳು) | ಪಟ್ಟಿ-II (ವಿಧಿಗಳು) |
|---|---|
| (a) ಪಂಚಾಯತಿಗಳಿಗೆ ಚುನಾವಣೆ | (i) 243J |
| (b) ಪಂಚಾಯಿತಿಗಳ ಅವಧಿ | (ii) 243D |
| (c) ಪಂಚಾಯಿತಿಗಳಲ್ಲಿ ಸ್ಥಾನಗಳ ಮೀಸಲಾತಿ | (iii) 243E |
| (d) ಪಂಚಾಯಿತಿಗಳ ಲೆಕ್ಕ ಪರಿಶೋಧನೆ | (iv) 243K |

ಸಂಕೇತಗಳು:

(1) a – i, b – ii, c – iii, d – iv
(2) a – iv, b – iii, c – i, d – ii
(3) a – iv, b – iii, c – ii, d – i
(4) a – ii, b – i, c – iii, d – iv

68. ಅಶೋಕ ಮೆಹ್ತಾ ಸಮಿತಿಯ ಶಿಫಾರಸ್ಸುಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಯಾವ ಅಂಶ ತಪ್ಪಾಗಿದೆ?

(1) ಮಂಡಲ ಪಂಚಾಯಿತಿಯ ಸ್ಥಾಪನೆ.
(2) ಪಂಚಾಯಿತಿ ಸಮಿತಿಯನ್ನು ಕಾರ್ಯನಿರ್ವಹಣಾ ಅಂಗವಾಗಿಸುವುದು.
(3) ಎರಡು ಸ್ತರಗಳ ಪಂಚಾಯಿತಿ ರಾಜ್ ವ್ಯವಸ್ಥೆ.
(4) ಪಂಚಾಯಿತಿ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳ ಭಾಗವಹಿಸುವಿಕೆ.

69. ಪಟ್ಟಿ-I ನ್ನು ಪಟ್ಟಿ-II ರ ಜೊತೆ ಹೊಂದಿಸಿ, ಸರಿಯಾದ ಉತ್ತರವನ್ನು ಆರಿಸಿ.

| ಪಟ್ಟಿ-I (ಪಂಚಾಯತ್ ರಾಜ್ ಪದ್ಧತಿಯ ಹಂತಗಳು) | ಪಟ್ಟಿ-II (ರಾಜ್ಯಗಳು) |
|---|---|
| (a) ಗ್ರಾಮದ ಹಿರಿಯರ ಸಾಂಪ್ರದಾಯಿಕ ಮಂಡಳಿ | (i) ಪಂಜಾಬ್ |
| (b) ಕೇವಲ ಒಂದು ಹಂತದ ಪದ್ಧತಿ | (ii) ಒರಿಸ್ಸಾ |
| (c) ಎರಡು ಹಂತದ ಪದ್ಧತಿ | (iii) ಸಿಕ್ಕಿಂ |
| (d) ಮೂರು ಹಂತದ ಪದ್ಧತಿ | (iv) ನಾಗಾಲ್ಯಾಂಡ್ |

ಸಂಕೇತಗಳು:

(1) a – iii, b – i, c – iv, d – ii
(2) a – ii, b – i, c – iii, d – iv
(3) a – i, b – iii, c – iv, d – ii
(4) a – iv, b – iii, c – ii, d – i

ಕಚ್ಚಾ ಕೆಲಸಕ್ಕೆ ಸ್ಥಳ

Telegram : @GEOKING_18

70. ರಾಷ್ಟ್ರೀಯ ಗ್ರಾಹಕ ವಿವಾದಗಳ ಪರಿಹಾರ ಆಯೋಗದ (NCDRC) ಪ್ರಸ್ತುತ ಅಧ್ಯಕ್ಷರು ಯಾರು?

(1) ಅಮರೇಶ್ವರ ಪ್ರತಾಪ್ ಸಾಹಿ
(2) ನಿಧಿ ಖರೆ
(3) ಪ್ರಹ್ಲಾದ್ ಜೋಷಿ
(4) ನಾಗೇಶ್ ಕುಮಾರ್

71. ಯಾವ ಪ್ರಕಾರದ ಯೋಜನೆಯು ಆರ್ಥಿಕ ಅಭಿವೃದ್ಧಿಗೆ ಉತ್ತಮವಾಗಿದೆ?

(a) ಬಂಡವಾಳಶಾಹಿ ಯೋಜನೆ
(b) ಸಮಾಜವಾದಿ ಯೋಜನೆ
(c) ಪ್ರಜಾಸತ್ತಾತ್ಮಕ ಯೋಜನೆ
(d) ನಿರಂಕುಶಾತ್ಮಕ ಯೋಜನೆ

(1) (a) ಮತ್ತು (b)
(2) (c) ಮತ್ತು (d)
(3) (b) ಮತ್ತು (d)
(4) (b) ಮತ್ತು (c)

72. ಭಾರತದ ಸಂವಿಧಾನದ ಯಾವ ತಿದ್ದುಪಡಿಯು ಸಹಕಾರ ಸಂಘಗಳಿಗೆ ಸಾಂವಿಧಾನಿಕ ಸ್ಥಾನಮಾನ ನೀಡಿತು?

(1) 97ನೆಯ ತಿದ್ದುಪಡಿ
(2) 96ನೆಯ ತಿದ್ದುಪಡಿ
(3) 98ನೆಯ ತಿದ್ದುಪಡಿ
(4) 99ನೆಯ ತಿದ್ದುಪಡಿ

73. ಸಮವರ್ತಿ ಪಟ್ಟಿಯ ವಿಚಾರವನ್ನು ಈ ಕೆಳಗಿನ ಯಾವ ಕಾಯ್ದೆಯಿಂದ ತೆಗೆದುಕೊಳ್ಳಲಾಯಿತು?

(a) 1909ರ ಭಾರತ ಕೌನ್ಸಿಲ್ ಕಾಯ್ದೆ
(b) 1919ರ ಭಾರತ ಸರ್ಕಾರ ಕಾಯ್ದೆ
(c) 1935ರ ಭಾರತ ಸರ್ಕಾರ ಕಾಯ್ದೆ
(d) 1858ರ ಭಾರತ ಸರ್ಕಾರ ಕಾಯ್ದೆ

Telegram : @GEOKING_18

(1) (a) ಮತ್ತು (b)
(2) (b) ಮತ್ತು (c)
(3) (a) ಮತ್ತು (d)
(4) (c) ಮಾತ್ರ

74. ರಾಜ್ಯವೊಂದರ ರಾಜ್ಯಪಾಲರು ಈ ಕೆಳಕಂಡ ಅಧಿಕಾರಗಳನ್ನು ಹೊಂದಿರುತ್ತಾರೆ.

(1) ಕಾರ್ಯಾಂಗೀಯ, ಶಾಸಕಾಂಗೀಯ ಮತ್ತು ವಿವೇಚನಾ ಅಧಿಕಾರಗಳು
(2) ಕಾರ್ಯಾಂಗೀಯ, ಶಾಸಕಾಂಗೀಯ, ಹಣಕಾಸಿನ, ನ್ಯಾಯಾಂಗೀಯ ಮತ್ತು ವಿವೇಚನಾ ಅಧಿಕಾರಗಳು
(3) ಶಾಸಕಾಂಗೀಯ, ಕಾರ್ಯಾಂಗೀಯ ಮತ್ತು ನ್ಯಾಯಿಕ ಅಧಿಕಾರಗಳು
(4) ಕಾರ್ಯಾಂಗೀಯ ಮತ್ತು ಹಣಕಾಸಿನ ಅಧಿಕಾರಗಳು

---

ಕಚ್ಚಾ ಕೆಲಸಕ್ಕೆ ಸ್ಥಳ

Telegram : @GEOKING_18

B2

75. 1925ರಲ್ಲಿ ಭಾರತದಲ್ಲಿ ಲೋಕಸಭೆಯ ಸ್ಪೀಕರ್ ಆಗಿ ಯಾರು ಚುನಾಯಿತರಾದರು?

(1) ಸರ್ ಮಹಮ್ಮದ್ ಯಾಕೂಬ್
(2) ಸರ್ ಇಬ್ರಾಹಿಂ ರಹಮತುಲ್ಲಾ
(3) ಸರ್ ಅಬ್ದುಲ್ ರಹೀಮ್
(4) ವಿಠಲ್‌ಭಾಯ್ ಪಟೇಲ್

76. ಪಟ್ಟಿ-I ನ್ನು ಪಟ್ಟಿ-II ರ ಜೊತೆ ಹೊಂದಿಸಿ, ಸರಿಯಾದ ಉತ್ತರವನ್ನು ಆರಿಸಿ.

| | ಪಟ್ಟಿ-I (ವಿಷಯಗಳು) | | ಪಟ್ಟಿ-II (ವಿಧಿಗಳು) |
|---|---|---|---|
| (a) | ಭಾರತದ ಸಂಚಿತ ನಿಧಿ | (i) | ವಿಧಿ 110 |
| (b) | ಭಾರತದ ಸಾದಿಲ್ವಾರು ನಿಧಿ | (ii) | ವಿಧಿ 112 |
| (c) | ಹಣಕಾಸು ಮಸೂದೆ | (iii) | ವಿಧಿ 266 |
| (d) | ವಾರ್ಷಿಕ ಹಣಕಾಸು ಹೇಳಿಕೆ | (iv) | ವಿಧಿ 267 |

ಸಂಕೇತಗಳು:

(1) a – iii, b – iv, c – ii, d – i
(2) a – iii, b – iv, c – i, d – ii
(3) a – iv, b – iii, c – ii, d – i
(4) a – i, b – ii, c – iii, d – iv

77. ಜನವರಿ 28, 1950 ಕ್ಕೂ ಮೊದಲು ಭಾರತದ ಅತ್ಯುನ್ನತ ಮೇಲ್ಮನವಿ ನ್ಯಾಯಾಲಯ ಯಾವುದು?

(1) ದಿ ಸುಪ್ರೀಂ ಕೋರ್ಟ್ ಆಫ್ ಇಂಡಿಯಾ
(2) ದಿ ಫೆಡರಲ್ ಕೋರ್ಟ್ ಆಫ್ ಇಂಡಿಯಾ
(3) ದಿ ಬ್ರಿಟೀಷ್ ಪ್ರಿವಿ ಕೌನ್ಸಿಲ್
(4) ದಿ ಯೂನಿಟರಿ ಕೋರ್ಟ್ ಆಫ್ ಇಂಡಿಯಾ

Telegram : @GEOKING_18

78. ಸಂಸತ್ತಿನ ಪ್ರಶ್ನೋತ್ತರ ಅವಧಿಗೆ ಸಂಬಂಧಿಸಿದಂತೆ ತಪ್ಪಾದ ಹೇಳಿಕೆಯನ್ನು/ಹೇಳಿಕೆಗಳನ್ನು ಗುರುತಿಸಿ.

(a) ಚುಕ್ಕೆ ಗುರುತಿನ ಪ್ರಶ್ನೆಗಳೆಂದರೆ ಸದನದಲ್ಲಿ ಸದಸ್ಯನು ಮೌಖಿಕ ಉತ್ತರವನ್ನು ಕೇಳುವುದು.

(b) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿದ್ದಾಗ ಸಂಬಂಧಿಸಿದ ಮಂತ್ರಿಯು ಲಿಖಿತ ಉತ್ತರವನ್ನು ಮೇಜಿನ ಮೇಲೆ ಇರಿಸುತ್ತಾರೆ.

(c) ಕಿರುಸೂಚನಾ ಪ್ರಶ್ನೆಗಳು ಕಡಿಮೆ ಅವಧಿಯಲ್ಲಿ ಕೇಳುವ ತುರ್ತು ಸಾರ್ವಜನಿಕ ಪ್ರಾಮುಖ್ಯತೆಯ ವಿಷಯಗಳಿಗೆ ಸಂಬಂಧಿಸಿದ್ದು, ಕಡಿಮೆ ಅವಧಿಯ ನೋಟಿಸ್ ನೀಡಿ ಕೇಳಬಹುದು.

(d) ಪೂರಕ ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕ ಉತ್ತರ ನೀಡುವ ಮೊದಲೇ ಕೇಳಬಹುದು.

ಕೆಳಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದುವನ್ನು ಆರಿಸಿ:

(1) (a) ಮತ್ತು (b)
(2) (d) ಮಾತ್ರ
(3) (a), (b) ಮತ್ತು (c)
(4) (c) ಮಾತ್ರ

ಕಚ್ಚಾ ಕೆಲಸಕ್ಕೆ ಸ್ಥಳ

Telegram : @GEOKING_18

79. ಸುಪ್ರೀಂಕೋರ್ಟ್‌ನ ಯಾವ ಪ್ರಕರಣ ರಾಷ್ಟ್ರಪತಿಯವರ ವಿಶ್ವಾಸವಿರುವವರೆಗೆ ರಾಜ್ಯಪಾಲರು ಅಧಿಕಾರದಲ್ಲಿರಬಹುದು ಎಂಬುದು ನ್ಯಾಯಸಮ್ಮತವಲ್ಲ ಎಂಬುದನ್ನು ಎತ್ತಿ ಹಿಡಿಯುತ್ತದೆ?

(1) ಸೂರ್ಯನಾರಾಯಣ ಚೌಧರಿ ಪ್ರಕರಣ, 1981 (2) ಎಸ್.ಆರ್. ಬೊಮ್ಮಾಯಿ ಪ್ರಕರಣ, 1994

(3) ಮಿನರ್ವಾ ಮಿಲ್ಸ್ ಪ್ರಕರಣ, 1980 (4) ಗೋಲಕ್‌ನಾಥ್ ಪ್ರಕರಣ, 1967

80. ಪಟ್ಟಿ-I ನ್ನು ಪಟ್ಟಿ-II ರ ಜೊತೆ ಹೊಂದಿಸಿ, ಸರಿಯಾದ ಉತ್ತರವನ್ನು ಆರಿಸಿ.

| ಪಟ್ಟಿ-I (ಡಿಆರ್‌ಡಿಒ ನಿರ್ಮಿತ ಕ್ಷಿಪಣಿ) | | ಪಟ್ಟಿ-II (ಪ್ರಕಾರಗಳು) | |
|---|---|---|---|
| (a) | ಅಸ್ತ್ರ ಕ್ಷಿಪಣಿ | (i) | ಸಬ್ ಸಾನಿಕ್ ಕ್ರೂಸ್ ಕ್ಷಿಪಣಿ |
| (b) | ಮೈತ್ರಿ ಕ್ಷಿಪಣಿ | (ii) | ಅಲ್ಪ - ವ್ಯಾಪ್ತಿಯ ಭೂಮಿಯಿಂದ ಆಕಾಶಕ್ಕೆ ಚಿಮ್ಮುವ ಕ್ಷಿಪಣಿ |
| (c) | ನಾಗ್ ಕ್ಷಿಪಣಿ | (iii) | ಟ್ಯಾಂಕ್-ವಿರೋಧಿ ಮಾರ್ಗದರ್ಶಿತ ಕ್ಷಿಪಣಿ |
| (d) | ನಿರ್ಭಯ ಕ್ಷಿಪಣಿ | (iv) | ಆಕಾಶದಿಂದ-ಆಕಾಶಕ್ಕೆ ಚಿಮ್ಮುವ ಕ್ಷಿಪಣಿ |

ಸಂಕೇತಗಳು:

(1) a – iv, b – i, c – iii, d – ii (2) a – iii, b – ii, c – i, d – iv

(3) a – iv, b – iii, c – ii, d – i (4) a – iv, b – ii, c – iii, d – i

Telegram : @GEOKING_18

81. ಪ್ರಾದೇಶಿಕವಾದವನ್ನು ಕಡಿಮೆ ಮಾಡಲು ಸಂವಿಧಾನದ ನಿಬಂಧನೆಯ ಸರಿಯಾದ ಹೇಳಿಕೆಗಳನ್ನು ಗುರುತಿಸಿ.

(a) ಭಾಷಾವಾರು ರಾಜ್ಯಗಳ ಪುನರ್‌ರಚನೆ.

(b) ಸಮರೂಪದ ಒಕ್ಕೂಟ ವ್ಯವಸ್ಥೆ

(c) ಪ್ರಾದೇಶಿಕ ಭಾಷೆಗಳನ್ನು ಮೌಲ್ಯಮಾಪನ ಮಾಡುವುದು

(d) ಸಮುದಾಯ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸಾರ್ವಜನಿಕ ಸೇವೆಯನ್ನು ಸುಧಾರಿಸಲು ಸ್ಥಳೀಯ ಜ್ಞಾನವನ್ನು ಬಳಸುವುದು.

(1) (a) ಮತ್ತು (b) (2) (b) ಮತ್ತು (c)

(3) (a) ಮತ್ತು (c) (4) (b) ಮತ್ತು (d)

ಕಚ್ಚಾ ಕೆಲಸಕ್ಕೆ ಸ್ಥಳ

Telegram : @GEOKING_18

82. ಸರಿಯಾದ ಜೋಡಿಗಳನ್ನು ಗುರುತಿಸಿ.

| ಭ್ರಷ್ಟಾಚಾರ ವಿರೋಧಿ ಸಂಸ್ಥೆಗಳು | | ಪ್ರಾರಂಭಿಸಿದ ವರ್ಷ |
|---|---|---|
| (a) ಸಿ.ಬಿ.ಐ | – | 1962 |
| (b) ಇ.ಡಿ. | – | 1956 |
| (c) ಎ.ಸಿ.ಬಿ. | – | 1961 |
| (d) ಸಿ.ವಿ.ಸಿ. | – | 1961 |

(1) (a), (b) ಮತ್ತು (d)
(2) (a), (b) ಮತ್ತು (c)
(3) (c) ಮತ್ತು (d)
(4) (b), (c) ಮತ್ತು (d)

83. 'ಐ2ಯು2' ಅನ್ನು ಹೀಗೂ ಕರೆಯಲಾಗುತ್ತದೆ.

(a) ಮಧ್ಯ ಪ್ರಾಚ್ಯ ಕ್ವಾಡ್

(b) ಅರೇಬಿಕ್ ಕ್ವಾಡ್

(c) ಪಶ್ಚಿಮ ಕ್ವಾಡ್

(d) ಹೊಸ ಕ್ವಾಡ್

ಮೇಲಿನವುಗಳಲ್ಲಿ ಯಾವುದು/ವು ಸರಿಯಾಗಿದೆ/ವೆ?

(1) (b) ಮಾತ್ರ
(2) (a) ಮಾತ್ರ
(3) (c) ಮಾತ್ರ
(4) (a), (c) ಮತ್ತು (d)

Telegram : @GEOKING_18

84. ಭಾರತ ಮತ್ತು ಸಿಟಿಬಿಟಿ (CTBT)ಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಹೇಳಿಕೆ–I : ಭಾರತವು ಸಿಟಿಬಿಟಿ (CTBT) ಒಪ್ಪಂದಕ್ಕೆ ಸಹಿ ಹಾಕಿಲ್ಲ.

ಹೇಳಿಕೆ–II : ಭಾರತವು ಒಪ್ಪಂದದ ಅನುಬಂಧ–II ರಲ್ಲಿ ಪಟ್ಟಿ ಮಾಡಲ್ಪಟ್ಟಿದೆ.

ಮೇಲಿನ ಹೇಳಿಕೆಗಳಿಗೆ ಸಂಬಂಧಿಸಿದಂತೆ ಕೆಳಗಿನವುಗಳಲ್ಲಿ ಯಾವುದು ಸರಿ?

(1) ಹೇಳಿಕೆ -I ಮತ್ತು ಹೇಳಿಕೆ -II ಎರಡೂ ಸರಿ ಮತ್ತು ಹೇಳಿಕೆ-II ಹೇಳಿಕೆ-I ಅನ್ನು ವಿವರಿಸುತ್ತದೆ.

(2) ಹೇಳಿಕೆ -I ಮತ್ತು ಹೇಳಿಕೆ -II ಎರಡೂ ಸರಿ, ಆದರೆ ಹೇಳಿಕೆ-II ಹೇಳಿಕೆ-I ಅನ್ನು ವಿವರಿಸುವುದಿಲ್ಲ.

(3) ಹೇಳಿಕೆ -I ಸರಿ, ಆದರೆ ಹೇಳಿಕೆ -II ತಪ್ಪು.

(4) ಹೇಳಿಕೆ -I ತಪ್ಪು, ಆದರೆ ಹೇಳಿಕೆ -II ಸರಿ.

---

ಕಚ್ಚಾ ಕೆಲಸಕ್ಕೆ ಸ್ಥಳ

Telegram : @GEOKING_18

85. ಕೆಳಗಿನವುಗಳಲ್ಲಿ ಯಾರು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಭಾಗವಾಗಿರುತ್ತಾರೆ?

(a) ಪ್ರಧಾನ ಮಂತ್ರಿ
(b) ಅಧ್ಯಕ್ಷರು, ಹಣಕಾಸು ಆಯೋಗ
(c) ಕೇಂದ್ರದ ಕ್ಯಾಬಿನೆಟ್ ಮಂತ್ರಿಗಳು
(d) ರಾಜ್ಯಗಳ ಮುಖ್ಯಮಂತ್ರಿಗಳು

(1) (a), (b) ಮತ್ತು (c)
(2) (b), (c) ಮತ್ತು (d)
(3) (a), (c) ಮತ್ತು (d)
(4) (a) ಮತ್ತು (b)

86. ಶೀತ ಪ್ರದೇಶಗಳಲ್ಲಿರುವ ಸರೋವರಗಳ ನೀರು ಚಳಿಗಾಲದಲ್ಲಿ

(1) ಮೇಲ್ಮೈಯಿಂದ ಘನೀಕರಣಗೊಳ್ಳಲು ಪ್ರಾರಂಭಿಸುತ್ತದೆ
(2) ಸರೋವರದ ತಳಭಾಗದಿಂದ ಘನೀಕರಣಗೊಳ್ಳಲು ಪ್ರಾರಂಭಿಸುತ್ತವೆ
(3) ಯಾವುದೇ ಪರಿಸ್ಥಿತಿಯಲ್ಲಿ ನೀರು ಘನೀಕರಣಗೊಳ್ಳುವುದಿಲ್ಲ
(4) ಘನೀಕರಣಗೊಳ್ಳಲು ಸರೋವರದ ಆಳವನ್ನು ಅವಲಂಬಿಸಿ ಮೇಲ್ಮೈಯಿಂದ ಅಥವಾ ತಳಭಾಗದಿಂದ ಪ್ರಾರಂಭವಾಗುತ್ತದೆ.

87. ಅಲೆಗಳ ಉಪಯೋಗಗಳಿಗೆ ಸಂಬಂಧಿಸಿದಂತೆ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ.

| | ಪಟ್ಟಿ-I | | ಪಟ್ಟಿ-II |
|---|---|---|---|
| (a) | ವೇಗವಾಗಿ ಚಲಿಸುವ ವಾಹನಗಳ ವೇಗವನ್ನು ಪತ್ತೆ ಹಚ್ಚುವುದು. | (i) | ಸೋನಾರ್ (SONAR) |
| (b) | ಶರೀರದ ಬೇರೆ ಬೇರೆ ಭಾಗಗಳಲ್ಲಿನ ರಕ್ತ ಚಲನೆಯನ್ನು ಅಧ್ಯಯನ ಮಾಡುವುದು | (ii) | ಶ್ರವಣಾತೀತ ಸ್ಕ್ಯಾನಿಂಗ್ |
| (c) | ಸಮುದ್ರದ ಆಳವನ್ನು ಅಳತೆ ಮಾಡುವುದು | (iii) | ರಾಡಾರ್ (RADAR) |
| (d) | ಮಾನವನ ಶರೀರದ ಒಳಾಂಗಗಳ ಚಿತ್ರವನ್ನು ಪಡೆಯುವುದು | (iv) | ಸೋನೊಗ್ರಫಿ |

ಸಂಕೇತಗಳು:

(1) a – ii, b – iii, c – i, d – iv
(2) a – ii, b – i, c – iv, d – iii
(3) a – iii, b – iv, c – i, d – ii
(4) a – i, b – iv, c – iii, d – ii

88. ಬಾವಲಿಗಳು ________ ತರಂಗಗಳನ್ನು ಹೊರಹೊಮ್ಮಿಸುವ ಮೂಲಕ ಮತ್ತು ಅವುಗಳ ಪ್ರತಿಫಲಿತ ಕಿರಣಗಳ ಮೂಲಕ ತಮ್ಮ ಆಹಾರವನ್ನು ಹುಡುಕುತ್ತವೆ ಮತ್ತು ಕತ್ತಲೆ ರಾತ್ರಿಯಲ್ಲಿ ಹಾರಾಡುತ್ತವೆ.

(1) ಅತಿ ನೇರಳೆ ತರಂಗಗಳು
(2) ಶ್ರವಣಾತೀತ ತರಂಗಗಳು
(3) ಸೂಕ್ಷ್ಮ ತರಂಗಗಳು
(4) ಅವಧ್ವನಿ ತರಂಗಗಳು

ಕಚ್ಚಾ ಕೆಲಸಕ್ಕೆ ಸ್ಥಳ

Telegram : @GEOKING_18

89. ಪಟ್ಟಿ-Iನ್ನು ಪಟ್ಟಿ-II ರೊಂದಿಗೆ ಹೋಲಿಸಿ ಸರಿಯಾದ ಉತ್ತರದ ಆಯ್ಕೆಯನ್ನು ಆರಿಸಿ.

| ಪಟ್ಟಿ-I (ಅಲ್ಕಾಲಾಯ್ಡ್) | | ಪಟ್ಟಿ-II (ಮೂಲ ಸಸ್ಯ) | |
|---|---|---|---|
| (a) | ಕ್ವಿನೈನ್ | (i) | ತಂಬಾಕು |
| (b) | ಮಾರ್ಫಿನ್ | (ii) | ಸಿಂಕೋನಾ ತೊಗಟೆ |
| (c) | ನಿಕೋಟಿನ್ | (iii) | ಕಾಫಿ ಬೀಜಗಳು |
| (d) | ಕೆಫಿನ್ | (iv) | ಅಫೀಮು ಗಸಗಸೆ |

ಸಂಕೇತಗಳು:

(1) a – iv, b – ii, c – i, d – iii
(2) a – ii, b – iv, c – i, d – iii
(3) a – iv, b – ii, c – iii, d – i
(4) a – iii, b – i, c – iv, d – ii

90. ಗರಿಷ್ಠ-ಕನಿಷ್ಠ (ಮ್ಯಾಕ್ಸಿಮಮ್-ಮಿನಿಮಮ್) ಥರ್ಮೋಮೀಟರನ್ನು ________ ಎಂದು ಕರೆಯುತ್ತಾರೆ.

(1) 5's ಥರ್ಮೋಮೀಟರ್
(2) 6's ಥರ್ಮೋಮೀಟರ್
(3) ಲಿಕ್ವಿಡ್ ಥರ್ಮೋಮೀಟರ್
(4) ಕ್ಲಿನಿಕಲ್ ಥರ್ಮೋಮೀಟರ್

91. ಪಟ್ಟಿ-I ನ್ನು ಪಟ್ಟಿ-II ರ ಜೊತೆ ಹೊಂದಿಸಿ ಮತ್ತು ಸರಿಯಾದ ಉತ್ತರವನ್ನು ಆರಿಸಿ.

| ಪಟ್ಟಿ-I (ಸಂಯುಕ್ತಗಳು) | | ಪಟ್ಟಿ-II (ಕಾರ್ಯಶೀಲತೆ) | |
|---|---|---|---|
| (a) | ಅಸಿಟೈಲ್ ಕೊಲೈನ್ | (i) | ಕೃತಕ ಸಿಹಿಕಾರಕ |
| (b) | ಸುಕ್ರಲೋಸ್ | (ii) | ಆ್ಯಂಟಿಬಯೋಟಿಕ್ |
| (c) | ಕ್ಲೊರೊಂಫಿನಿಕೊಲ್ | (iii) | ಡಿಸ್ಇನ್ಫೆಕ್ಟಂಟ್ |
| (d) | ಫಿನಾಲ್ | (iv) | ನ್ಯೂರೊಟ್ರಾನ್ಸ್ಮಿಟರ್ಸ್ |

ಸಂಕೇತಗಳು:

(1) a – i, b – ii, c – iii, d – iv
(2) a – ii, b – iii, c – iv, d – i
(3) a – iii, b – iv, c – i, d – ii
(4) a – iv, b – i, c – ii, d – iii

92. ಕೆಳಗಿನ ಯಾವ ಜೀವಿಗಳ ಗುಂಪುಗಳು ನಾಲ್ಕು ಕೋಣೆಗಳುಳ್ಳ ಹೃದಯವನ್ನು ಹೊಂದಿವೆ?

(1) ಉಭಯವಾಸಿಗಳು, ಸರೀಸೃಪಗಳು, ಪಕ್ಷಿಗಳು
(2) ಮೊಸಳೆಗಳು, ಪಕ್ಷಿಗಳು, ಸಸ್ತನಿಗಳು
(3) ಮೊಸಳೆಗಳು, ಹಲ್ಲಿಗಳು, ಆಮೆಗಳು
(4) ಹಲ್ಲಿಗಳು, ಸಸ್ತನಿಗಳು, ಪಕ್ಷಿಗಳು

ಕಚ್ಚಾ ಕೆಲಸಕ್ಕೆ ಸ್ಥಳ

Telegram : @GEOKING_18

93. ಈ ಕೆಳಕಂಡ ಹೇಳಿಕೆಗಳನ್ನು ಓದಿ. ಸರಿಯಾದ ಆಯ್ಕೆಯನ್ನು ಆರಿಸಿ.

ಹೇಳಿಕೆ-I : ಹಸಿರು ಮನೆಯಲ್ಲಿ ಕಾರ್ಬನ್ ಡೈ ಆಕ್ಸೈಡ್ ($CO_2$) ನ ಸಾಂದ್ರತೆ ಜಾಸ್ತಿ ಇರುವುದರಿಂದ ಟೊಮ್ಯಾಟೋ ಮತ್ತು ಬೆಲ್ ಪೆಪ್ಪರ್‌ಗಳ ಉತ್ಪಾದಕತೆ ಹೆಚ್ಚಳವಾಗುತ್ತದೆ.

ಹೇಳಿಕೆ-II : ಮೆಕ್ಕೆಜೋಳ ಮತ್ತು ಜೋಳಗಳು ಶುಷ್ಕ ಉಷ್ಣವಲಯ ವಾತಾವರಣಕ್ಕೆ ಹೊಂದಿಕೊಳ್ಳುವುದಿಲ್ಲ.

(1) ಹೇಳಿಕೆ -I ಮತ್ತು ಹೇಳಿಕೆ -II ಎರಡೂ ಸರಿ.
(2) ಹೇಳಿಕೆ -I ಸರಿ, ಆದರೆ ಹೇಳಿಕೆ-II ತಪ್ಪು.
(3) ಹೇಳಿಕೆ -I ತಪ್ಪು, ಆದರೆ ಹೇಳಿಕೆ -II ಸರಿ
(4) ಹೇಳಿಕೆ -I ಮತ್ತು ಹೇಳಿಕೆ -II ಎರಡೂ ತಪ್ಪು.

94. ತಪ್ಪಾದ ಹೇಳಿಕೆಯನ್ನು ಗುರುತಿಸಿ.

(1) ಮೆಲಟೋನಿನ್ ನಮ್ಮ ದೇಹದ ದೈನಿಕ ಲಯಬದ್ಧತೆಯನ್ನು (24 ಗಂಟೆಯ) ನಿಯಂತ್ರಿಸುತ್ತದೆ.
(2) ಥೈರೋಕ್ಯಾಲ್ಸಿಟೋನಿನ್ ರಕ್ತದ ಕ್ಯಾಲ್ಸಿಯಂ ಪ್ರಮಾಣವನ್ನು ನಿಯಂತ್ರಿಸುತ್ತದೆ.
(3) ಪ್ಯಾರಾಥೈರಾಯ್ಡ್ ರಸದೂತ ರಕ್ತದಲ್ಲಿರುವ ಕ್ಯಾಲ್ಸಿಯಂ ಪ್ರಮಾಣವನ್ನು ಇಳಿಸುತ್ತದೆ.
(4) ಅಡ್ರಿನಲಿನ್ ಮತ್ತು ನಾರ್‌ಅಡ್ರಿನಲಿನ್ ಹಾರಾಟ ಅಥವಾ ಹೋರಾಟದ ರಸದೂತಗಳು.

95. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ.

ಹೇಳಿಕೆ-I : 'ಒ' ರಕ್ತ ಗುಂಪು ಹೊಂದಿರುವ ವ್ಯಕ್ತಿಗಳನ್ನು ಸಾರ್ವತ್ರಿಕ ದಾನಿ ಎಂದು ಕರೆಯಲಾಗುತ್ತದೆ.

ಹೇಳಿಕೆ-II : 'ಒ' ರಕ್ತ ಗುಂಪು ಹೊಂದಿರುವ ವ್ಯಕ್ತಿಗಳ ಕೆಂಪು ರಕ್ತ ಕಣಗಳ ಮೇಲೆ ಯಾವುದೇ ಪ್ರತಿಜನಕಗಳು (ಆ್ಯಂಟಿಜೆನ್‌ಗಳು) ಇರುವುದಿಲ್ಲ.

ಈ ಕೆಳಕಂಡ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

(1) ಹೇಳಿಕೆ -I ಮತ್ತು ಹೇಳಿಕೆ-II ಎರಡೂ ತಪ್ಪಾಗಿವೆ.
(2) ಹೇಳಿಕೆ -I ಸರಿಯಾಗಿದೆ, ಆದರೆ ಹೇಳಿಕೆ-II ತಪ್ಪಾಗಿದೆ.
(3) ಹೇಳಿಕೆ-I ತಪ್ಪಾಗಿದೆ, ಆದರೆ ಹೇಳಿಕೆ-II ಸರಿಯಾಗಿದೆ.
(4) ಹೇಳಿಕೆ -I ಮತ್ತು ಹೇಳಿಕೆ-II ಎರಡೂ ಸರಿಯಾಗಿವೆ.

96. ಒಬ್ಬ ಮೊಬೈಲ್ ತಯಾರಕನು ಪ್ರತಿ ಮೊಬೈಲ್ ಸೆಟ್‌ನ್ನು ರೂ. 18,000 ಕ್ಕೆ ಮಾರಾಟ ಮಾಡುವ ಮೂಲಕ 20% ಲಾಭವನ್ನು ಗಳಿಸುತ್ತಾನೆ. ಉತ್ಪಾದನಾ ವೆಚ್ಚವು 10% ರಷ್ಟು ಹೆಚ್ಚಾದರೆ, 15% ಲಾಭಾಂಶವನ್ನು ಗಳಿಸಲು ಮೊಬೈಲ್ ಸೆಟ್‌ನ ಹೊಸ ಮಾರಾಟ ಬೆಲೆ ಎಷ್ಟಿರಬೇಕು?

(1) ₹ 18,900
(2) ₹ 18,970
(3) ₹ 18,975
(4) ₹ 18,960

ಕಚ್ಚಾ ಕೆಲಸಕ್ಕೆ ಸ್ಥಳ

Telegram : @GEOKING_18

97. ಮಗನ ಪ್ರಸ್ತುತ ವಯಸ್ಸು ಅವನ ತಾಯಿಯ ಪ್ರಸ್ತುತ ವಯಸ್ಸಿನ ನಾಲ್ಕನೇ ಒಂದು ಭಾಗದಷ್ಟಿದೆ. 10 ವರ್ಷಗಳ ನಂತರ, ತಾಯಿಯ ವಯಸ್ಸು ಮಗನ ವಯಸ್ಸಿನ ಎರಡರಷ್ಟಿರುತ್ತದೆ. ತಾಯಿಯ ಪ್ರಸ್ತುತ ವಯಸ್ಸನ್ನು ಕಂಡುಹಿಡಿಯಿರಿ.

(1) 12 ವರ್ಷಗಳು
(2) 20 ವರ್ಷಗಳು
(3) 24 ವರ್ಷಗಳು
(4) 30 ವರ್ಷಗಳು

98. ನಿರಂತರ ನಾಲ್ಕು ವರ್ಷಗಳ ಅವಧಿಯ ಒಂದು ಕಂಪೆನಿಯ ಮಾರಾಟ ಮತ್ತು ಲಾಭಗಳನ್ನು ತೋರಿಸುವ ಈ ಕೆಳಗಿನ ಸ್ತಂಭ ರೇಖಾಚಿತ್ರವನ್ನು ಪರಿಗಣಿಸಿ ಮತ್ತು ಸರಿ ಉತ್ತರವನ್ನು ಆರಿಸಿ.




Telegram : @GEOKING_18

ಹೇಳಿಕೆಗಳು:

(i) ವರ್ಷದಿಂದ ವರ್ಷಕ್ಕೆ ಶೇಕಡಾವಾರು ಮಾರಾಟ ಪ್ರಮಾಣದಲ್ಲಿ ಸ್ಥಿರವಾದ ಬೆಳವಣಿಗೆಯಿದೆ.

(ii) 2025ರಲ್ಲಿ ಲಾಭದ ದರವು ಅತ್ಯಂತ ಕಡಿಮೆಯಾಗಿತ್ತು.

(iii) ನಾಲ್ಕು ವರ್ಷಗಳ ಅವಧಿಯಲ್ಲಿ ಲಾಭವು ದ್ವಿಗುಣವಾಗಿಲ್ಲ.

(iv) ಶೇಕಡಾವಾರು ವೆಚ್ಚವು 2022ರಲ್ಲಿ ಅತ್ಯಂತ ಕಡಿಮೆಯಿತ್ತು.

(1) ಹೇಳಿಕೆ (i), (iii) ಸರಿಯಾಗಿವೆ ಆದರೆ ಹೇಳಿಕೆ (ii) ಮತ್ತು (iv) ತಪ್ಪಾಗಿವೆ.

(2) ಹೇಳಿಕೆ (i), (ii) ಸರಿಯಾಗಿವೆ, ಆದರೆ ಹೇಳಿಕೆ (iii) ಮತ್ತು (iv) ತಪ್ಪಾಗಿವೆ.

(3) ಹೇಳಿಕೆ (i), (iii) ತಪ್ಪಾಗಿವೆ, ಆದರೆ ಹೇಳಿಕೆ (ii) ಮತ್ತು (iv) ಸರಿಯಾಗಿವೆ.

(4) ಹೇಳಿಕೆ (ii), (iii) ತಪ್ಪಾಗಿವೆ, ಆದರೆ ಹೇಳಿಕೆ (i) ಮತ್ತು (iv) ಸರಿಯಾಗಿವೆ.

---

ಕಚ್ಚಾ ಕೆಲಸಕ್ಕೆ ಸ್ಥಳ

Telegram : @GEOKING_18

99. ಸಮೀಕ್ಷೆಯೊಂದರಲ್ಲಿ X ಉತ್ಪನ್ನವನ್ನು 20 ಜನರು, Y ಉತ್ಪನ್ನವನ್ನು 25 ಜನರು, Z ಉತ್ಪನ್ನವನ್ನು 23 ಜನರು ಇಷ್ಟಪಡುತ್ತಾರೆ. 14 ಜನರು X ಮತ್ತು Y ಉತ್ಪನ್ನಗಳನ್ನು, 10 ಜನರು Y ಮತ್ತು Z ಉತ್ಪನ್ನಗಳನ್ನು, 8 ಜನರು X ಮತ್ತು Z ಉತ್ಪನ್ನಗಳನ್ನು ಮತ್ತು 6 ಜನರು ಎಲ್ಲಾ ಮೂರು ಉತ್ಪನ್ನಗಳನ್ನು ಇಷ್ಟ ಪಡುತ್ತಾರೆ. ಹಾಗಾದರೆ ಕೇವಲ ಒಂದು ಉತ್ಪನ್ನವನ್ನು ಮಾತ್ರ ಇಷ್ಟಪಡುವ ಜನರ ಸಂಖ್ಯೆ ಕಂಡುಹಿಡಿಯಿರಿ.

(1) 4 (2) 7

(3) 22 (4) 11

100. ಒಬ್ಬ ವ್ಯಕ್ತಿ ಪೂರ್ವಕ್ಕೆ ಮುಖ ಮಾಡಿದ್ದಾನೆ, ಅವನು ತನ್ನ ಎಡಭಾಗಕ್ಕೆ 180°ಯಷ್ಟು ತಿರುಗುತ್ತಾನೆ. ನಂತರ ಮತ್ತೆ ತನ್ನ ಎಡಕ್ಕೆ 45°ಯಷ್ಟು ತಿರುಗುತ್ತಾನೆ. ಈಗ ಅವನು ಯಾವ ದಿಕ್ಕಿಗೆ ಮುಖ ಮಾಡಿದ್ದಾನೆ?

(1) ಈಶಾನ್ಯ (2) ನೈಋತ್ಯ

(3) ಪಶ್ಚಿಮ (4) ದಕ್ಷಿಣ

Telegram : @GEOKING_18

Telegram : @GEOKING_18